ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com


ಎಪ್ರಿಲ್ 2022 ಸಂಪುಟ 18
ಸಂಚಿಕೆ 04
ಸಂಚಿಕೆ ಬೆಲೆ ರೂ. 1/-

# ಸ್ನೇಹ ಚಿಂತನ ಮಾಸ ಪತ್ರಿಕೆ

## ಶತಮಾನದ ಯುಗಪುರುಷನಿಗೊಂದು ನಮನ

ಸ್ನೇಹ ಜೀವಿ, ಸಹೃದಯಿ,
ನಿಗರ್ವಿ, ಖ್ಯಾತ ಉದ್ಯಮಿ, ಕೊಡುಗೈದಾನಿ
ದಿ| ಡಾ| ಆರ್.ಎನ್. ಶೆಟ್ಟಿ

ಇವರ ಪ್ರತಿಮೆ ಬಂಟರ ಸಂಘ
ಆರ್.ಎನ್.ಎಸ್ ವಿದ್ಯಾನಿಕೇತನದ
ಸಂಕೀರ್ಣದಲ್ಲಿ ಮೇ 1, 2022ರಂದು
ಲೋಕಾರ್ಪಣೆಗೊಳ್ಳಲಿದೆ



324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# ಬಂಟರ ಸಂಘ ಬೆಂಗಳೂರು

## ಚುನಾವಣೆ : 2022-24



**ಸಮುದಾಯ ಬಾಂಧವರಲ್ಲಿ ಪ್ರೀತಿ ಪೂರ್ವಕ ವಿನಂತಿ,**

ಬೆಂಗಳೂರು ಬಂಟರ ಸಂಘದಲ್ಲಿ ವಿವಿಧ ಉಪ ಸಮಿತಿಗಳಲ್ಲಿ ತೊಡಗಿಸಿಕೊಂಡು ಹಿಂದೆ ಎರಡು ಬಾರಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ, ಸಮಾಜ ಸೇವಾ ಸಮಿತಿಯ ಚೇರ್‌ಪರ್ಸನ್ ಆಗಿ ಸಮುದಾಯದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಸಂಘದ ಹೊರತಾಗಿಯೂ ಸಮಾಜ ಬಾಂಧವರೊಂದಿಗಿನ ನಿರಂತರ ಸಂವಹನದ ಮೂಲಕ ನಿಮ್ಮೊಂದಿಗಿದ್ದವನು ನಾನು. ಇದೀಗ ಮುಂಬರುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ **ಖಜಾಂಚಿ** ಹುದ್ದೆಗೆ ಸೇವಾಕಾಂಕ್ಷಿಯಾಗಿದ್ದೇನೆ.

ತಮ್ಮ ಮಾರ್ಗದರ್ಶನ, ಸದಾಶಯ ಹಾಗೂ ಶುಭಾಶೀರ್ವಾದಗಳು ಎಂದಿಗೂ ನನ್ನೊಂದಿಗೆ ಇರಲಿ ಎಂಬ ಪ್ರಾರ್ಥನೆಯೊಂದಿಗೆ,

ಇಂತಿ ನಿಮ್ಮವ

**ಅಮರನಾಥ್ ಶೆಟ್ಟಿ ಎಚ್.**

ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ
2014-16 ಮತ್ತು 2016-2018

ಡೈರೆಕ್ಟರ್ - ಸ್ಮಾರ್ಟ್ ಲೈನರ್ ಇಂಡಿಯಾ ಪ್ರೈ. ಲಿ.,

ಮೊ : 98440 72857

**'ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ'**

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 18** **APRIL 2022** **ISSUE 04**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಡಾ॥ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

– ಸಂಪಾದಕ ಮಂಡಳಿ

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಶತಮಾನದ ಯುಗಪುರುಷನಿಗೊಂದು ನಮನ | 5 |
| 5. | ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ | 12 |
| 6. | ಸಮಾಜ ಸೇವಾ ಸಮಿತಿ ಮತ್ತು ಸೇವಾದಳ – ಸೇವಾ ಚೇತನ–II | 14 |
| 7. | ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ – ಯಕ್ಷಗಾನ ಮತ್ತು ರಂಗತರಬೇತಿ ತರಗತಿಯ ಉದ್ಘಾಟನೆ | 17 |
| 8. | Bunts' Sangha RNS Evening College - Annual Sports Meet 2021-22 | 19 |
| 9. | Healing Touch | 21 |
| 10. | ಬಂಟರ ಜೀವನ ಮೌಲ್ಯಗಳು ಕುಸಿಯುತ್ತಿದೆಯೇ ? | 35 |
| 11. | Matrimonial Services Committee | 42 |

**ಮುಖಪುಟ**

**ಶತಮಾನದ ಯುಗಪುರುಷನಿಗೊಂದು ನಮನ**



# ದೈವ ದೇವರು ಮತ್ತು ನಂಬಿಕೆ

ನಾವು ನಮ್ಮ ಹಿರಿಯರು ಹೇಳಿದನ್ನು ಕೇಳಿರಬಹುದು, ಶ್ರೀ ಮಧ್ವಾಚಾರ್ಯರ ಮುಂದೆ ಮುದ್ದು ಬಾಲಕೃಷ್ಣ ಬಂದು ಕುಣಿಯುತ್ತಿದ್ದ, ಅವರ ಜೊತೆ ಆಟವಾಡುತ್ತಿದ್ದ ಎಂದು. ಹಾಗೆಯೇ ಕನಕದಾಸರಿಗೋಸ್ಕರ ಶ್ರೀ ಕೃಷ್ಣನೇ ತಿರುಗಿ ಅವರ ಕಡೆ ಮುಖ ಮಾಡಿ ನಿಂತ...., ಕಡು ಲೋಭಿ, ವ್ಯಾಪಾರಿಯಾಗಿದ್ದ ಶ್ರೀನಿವಾಸ ನಾಯಕನಲ್ಲಿಗೆ ಮಾರುವೇಷದಲ್ಲಿ ಬಂದ ಶ್ರೀ ಕೃಷ್ಣ ಅವರನ್ನೇ ಪರೀಕ್ಷಿಸಿ, ತದನಂತರ ಆ ಶ್ರೀನಿವಾಸ ನಾಯಕ ದಾಸಶ್ರೇಷ್ಠ ಪುರಂದರ ದಾಸರಾಗಿ ಪರಿವರ್ತನೆಗೊಳ್ಳಲಿಲ್ಲವೇ? ಹೀಗೆ ಹಲವಾರು ಕಥೆಗಳನ್ನು ನಾವು ಕೇಳಿರುವುದಲ್ಲದೇ ಅನೇಕ ಕಡೆ ಇಂತಹ ಸಂಗತಿಗಳನ್ನು ನಂಬುವಂತಹ ಕುರುಹುಗಳೂ ಇದೆ. ಅಖಂಡ ಭಾರತದ ಚರಿತ್ರೆಯನ್ನು ಗಮನ ಹರಿಸಿ ನೋಡಿದಾಗ ಇಂತಹ ಅನೇಕ ಉದಾಹರಣೆಗಳು ನಮಗೆ ಸಿಗುತ್ತವೆ.

ಹಾಗಿದ್ದರೆ, ಸಾಮಾನ್ಯವಾಗಿ ನಮ್ಮ ಮುಂದೆ ಬರುವ ಪ್ರಶ್ನೆ, ಯಾರಾದರೂ ನಿಜವಾಗಿಯೂ ದೇವರನ್ನು ನೋಡಿದ್ದಾರಾ? ಆದರೆ ಇದೊಂದು ಬಲವಾದ ನಂಬಿಕೆಯ ಆಧಾರದ ಮೇಲೆ ನಿಂತಿರುವ ಸತ್ಯ. ಒಂದೊಮ್ಮೆ ಒಂದು ಸಂಸಾರ, ಗಂಡ ಹೆಂಡತಿ, ಮೂರು ನಾಲ್ಕು ಮಕ್ಕಳು, ಹೀಗೆ ಅವರೆಲ್ಲರೂ ಒಂದು ಪ್ರವಾಸಕ್ಕೆ ಅಣಿಯಾಗುತ್ತಾರೆ. ಹಡಗಿನಲ್ಲಿ ದೂರದ ಪ್ರಯಾಣ, ಕುಟುಂಬದ ಎಲ್ಲರೂ ಸಂಭ್ರಮಿಸುತ್ತಿರುತ್ತಾರೆ. ಇನ್ನೇನು, ಪ್ರಯಾಣಕ್ಕೆ ಸ್ವಲ್ಪ ದಿನ ಇರುವಾಗ ಅವರಲ್ಲಿ ಒಬ್ಬ ಹುಡುಗನಿಗೆ ನಾಯಿ ಕಚ್ಚುತ್ತದೆ. ಹಾಗಾಗಿ ಅವರು ಸ್ವಲ್ಪ ದಿನಗಳವರೆಗೆ ಎಲ್ಲಿಗೂ ಹೋಗುವ ಹಾಗಿಲ್ಲ, ಇದರಿಂದಾಗಿ ಅವರ ಪ್ರವಾಸ ರದ್ದಾಗುತ್ತದೆ. ಆಗ ಆ ಮಕ್ಕಳ ತಾಯಿ ಹೇಳುತ್ತಾಳೆ, ಇದೇ ನನ್ನ ದೌರ್ಭಾಗ್ಯ, ಯಾವಾಗಲೂ ಏನಾದರೊಂದು ಅಡ್ಡ ಬರುತ್ತದೆ, ನನಗೆ ಇಡೀ ದಿನ ಕೆಲಸ ಮಾಡುವುದೇ ಆಗಿದೆ.... ಎಂಬೆಲ್ಲಾ ಮಾತುಗಳನ್ನು ಆಡುತ್ತಾಳೆ. ಆದರೆ ಕೆಲವೇ ದಿನಗಳಲ್ಲಿ ಅವರಿಗೆ ತಿಳಿಯುತ್ತದೆ ಅವರು ಪ್ರಯಾಣ ಮಾಡಬೇಕಾಗಿದ್ದ ಹಡಗು ಆಳ ಸಮುದ್ರದಲ್ಲಿ ಮುಳುಗುತ್ತದೆ. ಈ ಸಮಾಚಾರವನ್ನು ಕೇಳಿದ ಅವರೆಲ್ಲರೂ ನಿಟ್ಟುಸಿರು ಬಿಡುತ್ತಾ ಆ ಭಗವಂತನೇ ನಮ್ಮನ್ನು ಉಳಿಸಿದ ಎಂದು ಹೇಳುತ್ತಾರೆ.

ಡಾ। ಎಚ್.ಎಸ್. ವೆಂಕಟೇಶ ಮೂರ್ತಿಯವರ ಒಂದು ಕವನದಲ್ಲಿ ಹೇಳಿರುವಂತೆ–

ಹಸಿರೋ ಹಸಿರಿನ ಹೆಸರಿಲ್ಲದ ಮರ। ಹರಿಯದಿರೋ ಅದರೆಲೆಯಾ।  
ಆ ಎಲೆಯಲ್ಲಿ ಮಲಗಿರಬಹುದು। ನಮ್ಮನು ಕಾಯುವ ದೈವ॥  
ಗಾಳಿಗೆ ತೂಗುವ ತೊಟ್ಟಿಲು ಈ ಮರ। ಮುರಿಯದಿರೋ ಆ ಹರೆಯ।  
ಆ ಹರೆಯಲ್ಲಿ ಕುಳಿತಿರಬಹುದು। ಗೋಪಿ ಜನರ ಸುದೈವ॥

ಹೀಗೆ ಪರಮಾತ್ಮನು ಯಾವ ರೂಪದಲ್ಲಿ ಯಾವಾಗ ನಮ್ಮ ಮುಂದೆ ಬರುತ್ತಾನೆ ಎಂದು ಹೇಳಲಾಗುವುದಿಲ್ಲ. ಹಿಂದಿನಿಂದಲೂ ನಡೆದು ಬಂದ ಪದ್ಧತಿಯಂತೆ ಅನೇಕರು ಕಷ್ಟಕಾಲದಲ್ಲಿ ಅಥವಾ ಏನಾದರೂ ದೊಡ್ಡ ಕೆಲಸಗಳು, ಮದುವೆ, ಆರೋಗ್ಯ ಸಮಸ್ಯೆ ಇತ್ಯಾದಿಗಳಿಗೆ ದೇವರಲ್ಲಿ ಹರಕೆ ಹೇಳಿಕೊಳ್ಳುವುದು ವಾಡಿಕೆ. ಅದರಂತೆ ಅಂತಹದರಲ್ಲಿ ಒಳಿತಾದರೆ ಆ ದೈವ ದೇವಸ್ಥಾನಗಳಿಗೆ ಹೋಗಿ ಹರಕೆ ತೀರಿಸುತ್ತಾರೆ. ಇದು ನಂಬಿಕೆಯಲ್ಲವೇ? ದೇವರು ಪ್ರತ್ಯಕ್ಷವಾಗಿ ಕಾಣದಿದ್ದರೂ ಪರೋಕ್ಷವಾಗಿ ಸಹಾಯ ಮಾಡುವುದೇ ದೈವಶಕ್ತಿ! ನಂಬಿದವರಿಗೆ ಅದರ ಅರಿವಾಗುವುದು ಸತ್ಯ.

ನಮ್ಮ ಬಂಟ ಸಮಾಜ ನೂರಾರು ವರ್ಷಗಳಿಂದ ನಂಬಿಕೊಂಡು ಬಂದ ದೈವ ದೇವರುಗಳಿಗೆ ಇಂದಿಗೂ ಕಾಲಕಾಲಕ್ಕೆ ಪೂಜೆ, ಕೋಲ, ನೇಮ ಹೀಗೆ ಅನೇಕ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದೆ. ಇಂತಹ ವಿಚಾರಗಳನ್ನು, ಅದರ ವೈಶಿಷ್ಟ್ಯತೆ, ವಿಧಾನ, ನಮ್ಮ ಸಂಸ್ಕೃತಿ, ಊರು, ನಮ್ಮ ಪೂರ್ವಜರ ಮನೆಗಳು ಹಾಗೂ ಬಂಟ ಸಮಾಜದವರಾಗಿ ನಮ್ಮ ಜವಾಬ್ದಾರಿಗಳನ್ನು ಮುಂದಿನ ಪೀಳಿಗೆಗೆ ಅರಿವು ಮಾಡಿ ಕೊಡುವುದು ನಮ್ಮ ಬಹುಮುಖ್ಯ ಕರ್ತವ್ಯವಾಗಿರುತ್ತದೆ.

**ಎಂ. ಮುರಲೀಧರ ಹೆಗ್ಡೆ**
**hegdemm@gmail.com**

# ಅಧ್ಯಕ್ಷರ ಮಾತು



**ಬಂಟ ಸಮುದಾಯದ ಯುಗಪುರುಷನಿಗೆ ನಮನ**

ಮುರುಡೇಶ್ವರದ ಪುಟ್ಟ ಹಳ್ಳಿಯಲ್ಲಿ ಜನಿಸಿ, ಹಂತಹಂತವಾಗಿ ವಿವಿಧ ಉದ್ಯಮಗಳನ್ನು ದೇಶದಾದ್ಯಂತ ಪ್ರಾರಂಭಿಸಿದ ಯಶಸ್ವೀ ಉದ್ಯಮಿ, ಆರ್.ಎನ್.ಎಸ್. ಸಮೂಹ ಸಂಸ್ಥೆಗಳ ಸಂಸ್ಥಾಪಕ, ಬಂಟ ಸಮುದಾಯದ ಕೀರ್ತಿಯನ್ನು ದೇಶದ ಉದ್ದಗಲಕ್ಕೂ ಪಸರಿಸಿದ ಹಿರಿಯ ಚೇತನ ಡಾ. ಆರ್.ಎನ್.ಶೆಟ್ಟಿಯವರು. ನಮ್ಮ ಸಂಘವನ್ನು ಹಾಗೂ ಸಂಘದ ಶೈಕ್ಷಣಿಕ ಸೇವೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಡಾ. ಆರ್.ಎನ್.ಶೆಟ್ಟಿಯವರು ನೀಡಿದ ಕೊಡುಗೆಯನ್ನು ನಾವೆಂದಿಗೂ ಮರೆಯುವಂತಿಲ್ಲ. ಬೆಂಗಳೂರು ಬಂಟರ ಸಂಘ ಮಾತ್ರವಲ್ಲದೇ ರಾಜ್ಯದ ಇತರ ಸ್ಥಳಗಳಲ್ಲಿ ಪ್ರಾರಂಭಗೊಂಡ ಬಂಟರ ಸಂಘಗಳಿಗೂ ಬೃಹತ್ ಮೊತ್ತದ ದೇಣಿಗೆ ನೀಡುವುದರ ಮೂಲಕ ಬಂಟ ಸಮುದಾಯದ ಅಭ್ಯುದಯಕ್ಕೆ ತಮ್ಮ ಕಾರಣೀಕರ್ತರಾಗಿರುತ್ತಾರೆ. ಯಶಸ್ವೀ ಉದ್ಯಮಿಯಾಗಿ, ಕೊಡುಗೈದಾನಿ, ಶೈಕ್ಷಣಿಕ ಕ್ಷೇತ್ರದ ಹರಿಕಾರ, ಸಾವಿರಾರು ಕುಟುಂಬಗಳಿಗೆ ಆಸರೆಯಾದ ಡಾ.ಆರ್.ಎನ್. ಶೆಟ್ಟಿಯವರ ಪ್ರತಿಮೆಯನ್ನು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಮುಂಭಾಗದಲ್ಲಿ ಸ್ಥಾಪಿಸಲು ತೀರ್ಮಾನಿಸಲಾಗಿದ್ದು, ಪ್ರತಿಮೆ ಅನಾವರಣ ಕಾರ್ಯಕ್ರಮ ಹಾಗೂ ಯುಗಾದಿ (ಬಿಸು) ಆಚರಣೆ ಕಾರ್ಯಕ್ರಮ ಜಂಟಿಯಾಗಿ ದಿನಾಂಕ 01.05.2022 ರಂದು ನಡೆಯಲಿದೆ.

ಇದೇ ಸಂದರ್ಭದಲ್ಲಿ ಶ್ರೀ ಎ. ಗಿರೀಶ್ ರೈಯವರ ಸಂಪಾದಕತ್ವದಲ್ಲಿ ನಮ್ಮ ದೇಶದ ಲೋಕ ಸಭೆ, ರಾಜ್ಯ ಸಭೆ, ಕರ್ನಾಟಕ ವಿಧಾನ ಸಭೆ, ವಿಧಾನ ಪರಿಷತ್ತು, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರದ ವಿಧಾನ ಸಭೆ ಮತ್ತು ಲೋಕಸಭೆಯ ಬಂಟ ಸದಸ್ಯರ ಸೇವೆ ಹಾಗೂ ಸಾಧನೆಗಳ ವಿವರಗಳುಳ್ಳ 'ಪ್ರಜಾ ಪ್ರಭುತ್ವ-ಬಂಟ ಜನಪ್ರತಿನಿಧಿಗಳು' ಎನ್ನುವ ಹೊತ್ತಿಗೆಯನ್ನು ಬಿಡುಗಡೆಗೊಳಿಸಲಿದ್ದು, ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಬೆಂಗಳೂರು ಹಾಗೂ ರಾಜ್ಯದ ವಿವಿಧ ಭಾಗಗಳ ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಬಂಟ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-2 ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣ ಹಾಗೂ ವಸತಿ ಕಲ್ಪಿಸುವ 'ಸಂಕಲ್ಪ' ಯೋಜನೆಯ ಸಂಪೂರ್ಣ ವಿವರ ಮತ್ತು ಅರ್ಜಿ ನಮೂನೆಗಳನ್ನು ಈ ಸಂಚಿಕೆಯಲ್ಲಿ ಹಾಗೂ ಸಂಘದ ವೆಬ್‌ಸೈಟ್ (www.buntsanghablr.com) ನಲ್ಲಿ ಪ್ರಕಟಿಸಲಾಗಿದೆ. ಇತರ ಸಂಘಗಳ ವಿನಂತಿಯ ಮೇರೆಗೆ ಪ್ರವೇಶ ಪರೀಕ್ಷೆಯ ದಿನಾಂಕವನ್ನು 08.05.2022 ಕ್ಕೆ ಮರುನಿಗದಿಗೊಳಿಸಲಾಗಿದೆ. ಅತ್ಯಂತ ಅರ್ಹರಿಗೆ ಈ ಯೋಜನೆಯ ಫಲ ಸಿಗುವಂತಾಗಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

ದಿನಾಂಕ 27.03.2022 ರಂದು ನಡೆದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಸಂದರ್ಭದಲ್ಲಿ ಡಾ. ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮಾಜಿ ಸಚಿವರಾದ ಶ್ರೀ ಬಿ. ರಮಾನಾಥ ರೈಯವರು 'ಬಂಟ ಸಮುದಾಯದಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿದ್ದಾರೆ, ಎಲ್ಲಾ ಬಂಟರು ಶ್ರೀಮಂತರಲ್ಲ ಹೀಗಾಗಿ ಬಂಟ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕು' ಎಂದು ಬಂಟರ ಸಂಘದ ಮೂಲಕ ಕೇಂದ್ರ ಸರಕಾರಕ್ಕೆ ಮನವಿ ಮಾಡಿದರು. ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಕಾರ್ಯಕ್ರಮದ ಮುಖ್ಯ ಅತಿಥಿ, ಕೇಂದ್ರ ಸರಕಾರದ ಮಾನ್ಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಖಾತೆ ಸಚಿವರಾದ ಶ್ರೀ ಎ. ನಾರಾಯಣ ಸ್ವಾಮಿಯವರು ಬಂಟರ ಸಂಘದ ಬೇಡಿಕೆಯನ್ನು ಈಡೇರಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ದಿನಾಂಕ 03.04.2022 ರಂದು ನಿಧನರಾದ ಸಂಘದ ಡೋನರ್ ಟ್ರಸ್ಟಿ, ಶ್ರೀ ಬಿ. ಸಂಜೀವ್ ಶೆಟ್ಟಿಯವರಿಗೆ ಸಂಘದ ಆಡಳಿತ ಮಂಡಳಿ ಹಾಗೂ ಸರ್ವ ಸದಸ್ಯರ ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ.

**ಸದಸ್ಯಬಾಂಧವರಿಗೆಲ್ಲರಿಗೂ ಸೌರಮಾನ ಯುಗಾದಿ (ಬಿಸು) ಹಬ್ಬದ ಹಾರ್ದಿಕ ಶುಭಾಶಯಗಳು.**

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



**ಸದಸ್ಯಬಾಂಧವರಿಗೆಲ್ಲರಿಗೂ ಸೌರಮಾನ ಯುಗಾದಿ (ಬಿಸು) ಹಬ್ಬದ ಹಾರ್ದಿಕ ಶುಭಾಶಯಗಳು.**

ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ದಿನಾಂಕ 05.03.2022ರಂದು 'ರಂಗತರಬೇತಿ' ಉದ್ಘಾಟನೆ ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ಸಂಘದಲ್ಲಿ ತರಬೇತಿ ಪಡೆಯುತ್ತಿರುವ ಮಹಿಳಾ ಕಲಾವಿದೆಯರಿಂದ ಮಾರುತಿ ಪ್ರತಾಪ ಎಂಬ ಯಕ್ಷಗಾನವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಆಯೋಜಿಸಿದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ ಮತ್ತು ಸಂಚಾಲಕರಾದ ಶ್ರೀ ಸಂತೋಷ್ ಕುಮಾರ್ ಶೆಟ್ಟಿಯವರಿಗೆ ಧನ್ಯವಾಗಳು.

ದಿನಾಂಕ 27.03.2022ರಂದು ಸಂಘದ ವಾರ್ಷಿಕ ನಡೆದ ಮಹಾಸಭೆಗೆ ಆಗಮಿಸಿ ಸಲಹೆ ಸೂಚನೆಗಳನ್ನು ನೀಡಿದ ಎಲ್ಲಾ ಸದಸ್ಯರಿಗೂ ವಂದನೆಗಳು. ಅದೇ ದಿನ ಸಂಜೆ ನಡೆದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ಸರಕಾರದ ಮಾಜಿ ಸಚಿವರಾದ ಶ್ರೀ ಬಿ. ರಮಾನಾಥ ರೈಯವರಿಗೆ ದಿ. ಡಾ. ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿಯನ್ನು ಹಾಗೂ ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಉದ್ಯಮಿಗಳಾದ ಶ್ರೀ ಸರ್ವೋತ್ತಮ ಶೆಟ್ಟಿ ಇವರಿಗೆ ದಿ. ಡಾ. ದರ್ಬೆ ಕೃಷ್ಣಾನಂದ ಚೌಟ ಸ್ಮಾರಕ ಸಾಂಸ್ಕೃತಿಕ ಸಾಧಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿಗಳಾಗಿ ಭಾರತ ಸರಕಾರದ ಮಾನ್ಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಖಾತೆ ಸಚಿವರಾದ ಶ್ರೀ ಎ. ನಾರಾಯಣ ಸ್ವಾಮಿಯವರು, ಮುಂಬಯಿಯ ಇಂಡಿಯನ್ ಬಂಟ್ಸ್ ಛೇಂಬರ್ ಆಫ್ ಕಾಮರ್ಸ್ & ಇಂಡಸ್ಟ್ರಿ ಇದರ ಅಧ್ಯಕ್ಷರಾದ ಶ್ರೀ ಕೆ.ಸಿ. ಶೆಟ್ಟಿ ಮತ್ತು ಮುಂಬೈ ಬಂಟರ ಸಂಘದ ಉಪಾಧ್ಯಕ್ಷರಾದ ಶ್ರೀ ಉಳ್ತೂರು ಮೋಹನದಾಸ ಶೆಟ್ಟಿಯವರು ಭಾಗವಹಿಸಿದ್ದರು. 2020-21ನೇ ಸಾಲಿನ ಸಾಂಸ್ಕೃತಿಕ ಸಮಿತಿಯ ವತಿಯಿಂದ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ಹಾಗೂ ಕ್ರೀಡಾ ಸಮಿತಿಯ ವತಿಯಿಂದ ಕ್ರೀಡಾ ಸಾಧಕರಿಗೆ ಕ್ರೀಡಾ ಸಾಧನಾ ಪ್ರಶಸ್ತಿಯನ್ನು ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ವತಿಯಿಂದ ದತ್ತಿನಿಧಿ ಪ್ರಶಸ್ತಿ ಹಾಗೂ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು. ಸಭಾ ಕಾರ್ಯಕ್ರಮದ ನಂತರ ಮಜಾಭಾರತ ತಂಡದವರಿಂದ ಹಾಸ್ಯ, ನೃತ್ಯ, ಮನೋರಂಜನಾ ಕಾರ್ಯಕ್ರಮಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಸಂಚಾಲಕರಾದ ಶ್ರೀ ಪಿ. ಪ್ರಸಾದ್ ಶೆಟ್ಟಿ, ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಶ್ರೀ ರಾಧಾಕೃಷ್ಣ ಶೆಟ್ಟಿ ಮತ್ತು ಸಂಚಾಲಕರಾದ ಶ್ರೀ ರಂಜಿತ್ ಶೆಟ್ಟಿ ಮತ್ತು ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ, ಸಂಚಾಲಕರಾದ ಶ್ರೀ ಉದಯ್ ಶೆಟ್ಟಿ ಇವರಿಗೆ ಧನ್ಯವಾದಗಳು.

ದಿನಾಂಕ 13.03.2022ರಂದು ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ಸಮಿತಿಯ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸೇವಾ ಚೇತನ-ಋಷಿ ಸಂಘದ ಸದಸ್ಯರು ಹಾಗೂ ಸದಸ್ಯೇತರರು ಆರೋಗ್ಯ ಸಂಬಂಧಿ ಹಾಗೂ ಇತರ ಸಮಾಜಮುಖಿ ಕಾರ್ಯಕ್ರಮಗಳ ಪ್ರಯೋಜನ ಪಡೆದು ಜನ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮವನ್ನು ಉತ್ತಮವಾಗಿ ಆಯೋಜಿಸಿದಂತಹ ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಚೇರ್‌ಮೆನ್ ಶ್ರೀ ಉಮೇಶ್ ಶೆಟ್ಟಿ ಎಂ. ಬಿ., ಸೇವಾದಳದ ಸಂಚಾಲಕರಾದ ಶ್ರೀ ಭಾಸ್ಕರ ಶೆಟ್ಟಿ ಮತ್ತು ಸಮಾಜ ಸೇವಾ ಸಮಿತಿಯ ಸಂಚಾಲಕರಾದ ಶ್ರೀ ಅಜಿತ್ ಶೆಟ್ಟಿ ಉಳ್ತೂರು ಇವರಿಗೆ ಧನ್ಯವಾದಗಳು.

ವಿವಾಹ ವೇದಿಕೆ ಸಮಿತಿಯ ವತಿಯಿಂದ ದಿನಾಂಕ 03.04.2022ರಂದು ವಧು-ವರರ ಅನ್ವೇಷಣಾ ಕಾರ್ಯಕ್ರಮನ್ನು ಆಯೋಜಿಸಲಾಗಿದ್ದು, ಅನೇಕ ವಿವಾಹಕಾಂಕ್ಷಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದರು. ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯ ದಂಪತಿಗಳನ್ನು ಗೌರವಿಸಲಾಯಿತು. ಕಾರ್ಯಕ್ರಮವನ್ನು ಆಯೋಜನೆ ಮಾಡಿದಂತಹ ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್ ಶ್ರೀ ತಾರಾಮಣಿ ಹೆಗ್ಡೆ ಮತ್ತು ಸಂಚಾಲಕರಾದ ಶ್ರೀ ಸುಧಾಕರ ಶೆಟ್ಟಿ ಇವರಿಗೆ ಧನ್ಯವಾದಗಳು.

ಬಂಟರ ಸಂಘದ ಪ್ರಮುಖ ದಾನಿ, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಚೇರ್‌ಮೆನ್‌ರಾದ್ದ ದಿ. ಡಾ. ಆರ್. ಎನ್. ಶೆಟ್ಟಿಯವರ ಪ್ರತಿಮೆ ಅನಾವರಣ ಕಾರ್ಯಕ್ರಮ ಹಾಗೂ ಸೌರಮಾನ ಯುಗಾದಿ (ಬಿಸು ಆಚರಣೆ) ದಿನಾಂಕ 01.05.2022ರಂದು ಹಮ್ಮಿಕೊಂಡಿದ್ದು ಸಂಘದ ಸದಸ್ಯರೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಯಲಚಗುಪ್ಪೆಯಲ್ಲಿ ಪ್ರಾರಂಭವಾದ ಶಾಲೆಯ ಪ್ರವೇಶಾತಿಯು ಪ್ರಾರಂಭವಾಗಿದ್ದು ಬಹಳಷ್ಟು ಬೇಡಿಕೆಯಿರುವುದು ಸಂತೋಷದ ವಿಚಾರ. ಆರ್.ಎನ್.ಎಸ್. ವಿದ್ಯಾನಿಕೇತನ – II ಇದರ ಉದ್ಘಾಟನಾ ಸಮಾರಂಭವನ್ನು ಮೇ ಕೊನೆಯ ವಾರದಲ್ಲಿ ಮಾಡುವಂತಹ ತಯಾರಿಯಲ್ಲಿ ನಾವಿದ್ದೇವೆ. ತಮ್ಮೆಲ್ಲರ ಸಹಕಾರವನ್ನು ಬಯಸುತ್ತಾ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ


**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಶತಮಾನದ ಯುಗಪುರುಷನಿಗೊಂದು ನಮನ



ಮುರಲೀಧರ ಹೆಗ್ಡೆ
ಮೊದಲ್ತಾವು

ಉತ್ತಮ ನಾಯಕತ್ವ ಗುಣ ಎಲ್ಲರಲ್ಲಿಯೂ ಇರುವುದಿಲ್ಲ. ಅದಕ್ಕೆ ಉತ್ತಮ ಗುರಿ, ಜ್ಞಾನ ಸಂಪಾದನೆ, ಕಠಿಣ ಪರಿಶ್ರಮ ಮತ್ತು ಸತತ ಪ್ರಯತ್ನಗಳು ಬೇಕಾಗುತ್ತವೆ. ಇಂತಹ ಅಪರೂಪದ ಗುಣಗಳನ್ನು ಹೊಂದಿದ್ದ ಛಲಗಾರ, ದೂರದೃಷ್ಟಿ ಹೊಂದಿದ್ದ ಶ್ರೀ ಆರ್.ಎನ್. ಶೆಟ್ಟಿಯವರ ಜೀವನವೇ ಎಲ್ಲರಿಗೂ ಆದರ್ಶ. 1928ರ ಆಗಸ್ಟ್ 15ರಂದು ಮುರುಡೇಶ್ವರದಲ್ಲಿ ಜನಿಸಿದ ಶ್ರೀಯುತರು ಕೃಷಿಕ ಕುಟುಂಬದಿಂದ ಬಂದವರು. ಅಷ್ಟೇನು ವಿದ್ಯಾಭ್ಯಾಸ ಹೊಂದಿಲ್ಲದ ಶ್ರೀ ಆರ್.ಎನ್. ಶೆಟ್ಟಿಯವರು ದುಡಿಮೆಯನ್ನೇ ನಂಬಿ ಸ್ವಂತ ಪ್ರಯತ್ನದಿಂದ





ಎತ್ತರಕ್ಕೆ ಬೆಳೆದವರು. 60ರ ದಶಕದ ಪ್ರಾರಂಭದಲ್ಲಿ ಕೆಲಸ ಪ್ರಾರಂಭಿಸಿದ ಇವರು ಆರ್.ಎನ್.ಎಸ್ ಸಂಸ್ಥೆಯನ್ನು ಹುಟ್ಟು ಹಾಕಿದರು.


ಅಲ್ಲಿಂದ ಶ್ರೀ ಶೆಟ್ಟಿಯವರು ಹಿಂದೆ ನೋಡಿದ್ದೇ ಇಲ್ಲ. ಹಲವಾರು ಚಿಂತನೆಗಳು, ಏನೇನೋ ಮಾಡಬೇಕೆಂಬ ಹಂಬಲ ಇವೆಲ್ಲಾ ಅವರನ್ನು ಕಾಡುತ್ತಿತ್ತು. ಗುತ್ತಿಗೆ ಕೆಲಸಗಳನ್ನು ಪ್ರಾರಂಭಿಸಿದ ನಂತರ ಇವರ ಪ್ರಾಜೆಕ್ಟ್‌ಗಳು ಇಡೀ ಕರ್ನಾಟಕವನ್ನೇ ಆವರಿಸಿತು. ಪಣಜಿ, ಮಂಗಳೂರು, ಬೆಳಗಾವಿ, ಧಾರವಾಡ ಮುಂತಾದ ಕಡೆಗಳಲ್ಲಿ ಹೆದ್ದಾರಿ, ಕೊಂಕಣ ರೈಲ್ವೆ ನಿರ್ಮಾಣ ಕಾರ್ಯದಲ್ಲಿ ಅನೇಕ ಸುರಂಗಗಳನ್ನು ನಿರ್ಮಿಸಿದ ಖ್ಯಾತಿ ಇವರದ್ದು. ಲಿಂಗನಮಕ್ಕಿ ಅಣೆಕಟ್ಟು, ವಾರಾಹಿ ಜಲವಿದ್ಯುತ್ ಯೋಜನೆ, ಭದ್ರಾ, ಕೃಷ್ಣಾನದಿ ನೀರಾವರಿ ಯೋಜನೆ ಹೀಗೆ ದೊಡ್ಡ ಮಟ್ಟದ ಕೆಲಸಗಳಲ್ಲಿ ಸೈ ಎನಿಸಿಕೊಂಡರು.

ಕೆ.ಎಲ್.ಇ. ಆಸ್ಪತ್ರೆ, ಮುರುಡೇಶ್ವರ, ಹುಬ್ಬಳ್ಳಿಗಳಲ್ಲಿ ಹೋಟೆಲ್‌ಗಳ ನಿರ್ಮಾಣ, ಬೆಂಗಳೂರಿನ ತಾಜ್ ಟ್ರಿನಿಟಿ, ತಾಜ್ ಯಶವಂತಪುರ ಹೋಟೇಲ್‌ಗಳು,



ಆರ್.ಎನ್.ಎಸ್. ಶಾಂತಿನಿಕೇತನ ಇತ್ಯಾದಿ ಬೃಹತ್ ಕಟ್ಟಡಗಳನ್ನು ನಿರ್ಮಿಸಿದರು. ಆರ್.ಎನ್.ಎಸ್. ಮೋಟಾರ್ಸ್ ಸಂಸ್ಥೆ, ಮುರುಡೇಶ್ವರ ಟೈಲ್ಸ್, ನವೀನ್ ಸೆರಾಮಿಕ್ಸ್ ಇತ್ಯಾದಿ ಅನೇಕ ಸಂಸ್ಥೆಗಳನ್ನು ಹುಟ್ಟುಹಾಕಿದರು.

ಮುರುಡೇಶ್ವರ ಕ್ಷೇತ್ರ ವಿಶ್ವವಿಖ್ಯಾತವಾಗಿರುವುದಕ್ಕೆ ಶ್ರೀಯುತ ಆರ್.ಎನ್. ಶೆಟ್ಟಿಯವರ ಯೋಚನೆ ಮತ್ತು ಶ್ರಮವೇ ಕಾರಣ ಎನ್ನಬಹುದು. ದೇವಸ್ಥಾನದ ಸರ್ವತೋಮುಖ ಅಭಿವೃದ್ಧಿ, ಜೀರ್ಣೋದ್ಧಾರ ಅವರ ಸಾರಥ್ಯದಲ್ಲಿ ನಡೆದಿದೆ. ಹಲವಾರು ವರ್ಷಗಳ ನಿರಂತರ ಪರಿಶ್ರಮದಿಂದ ಇಡೀ ಮುರುಡೇಶ್ವರ ಕ್ಷೇತ್ರವೇ ಹೊಸದಾಗಿ ಮಾರ್ಪಟ್ಟಿದೆ. ದೇವಸ್ಥಾನದ ಮುಖ್ಯ ರಾಜಗೋಪುರವು ವಿಶ್ವದ ಎರಡನೇ ಅತೀ ಎತ್ತರದ



ಗೋಪುರವಾಗಿದ್ದು, 21 ಮಹಡಿಗಳನ್ನು ಹೊಂದಿದ್ದು, 123 ಅಡಿ ಎತ್ತರವಿದೆ. ಕ್ಷೇತ್ರದ ಇನ್ನೊಂದು ವಿಶೇಷತೆ ಇಲ್ಲಿ ನಿರ್ಮಿಸಲಾದ 130 ಅಡಿ ಎತ್ತರದ, ವಿಶ್ವದ 2ನೇ ಅತೀ ಎತ್ತರದ ಶಿವನ ವಿಗ್ರಹ. ಹಾಗೆಯೇ ನಯನ ಮನೋಹರ ತಾಣವಾದ ಈ ಕ್ಷೇತ್ರದಲ್ಲಿ ಸುಂದರ ವಾಸ್ತು ಶೈಲಿಯ ಹೋಟೇಲ್‌ಗಳನ್ನೂ ಶ್ರೀಯುತ ಶೆಟ್ಟರು




ನಿರ್ಮಿಸಿದ್ದಾರೆ.


ಆಧುನಿಕ ದಾನಶೂರ ಕರ್ಣನೆಂದು ಇವರನ್ನು ಕರೆದರೆ ತಪ್ಪಾಗಲಾರದು. ಹೆಚ್ಚಿನ ಬಂಟರ ಸಂಘಗಳಿಗೆ ದೊಡ್ಡ ಮೊತ್ತದ ಉದಾರ ದಾನ ನೀಡಿದ್ದ ಶ್ರೀಯುತ ಶೆಟ್ಟರು ಅದರ ಬಗ್ಗೆ ಎಲ್ಲೂ ಮಾತನಾಡುತ್ತಿರಲಿಲ್ಲ. ಯಾವ ಪ್ರತಿಫಲವನ್ನೂ ಅವರು ಅಪೇಕ್ಷಿಸಿದವರಲ್ಲ. ಸರಳ ಸಜ್ಜನಿಕೆಯ ಭಾವನೆಯೇ ಅವರ ಆಭರಣ.




2001ರಲ್ಲಿ ನಿರ್ಮಾಣವಾದ ಬೆಂಗಳೂರು ಬಂಟರ ಸಂಘದ ಶಾಲೆಯ ಕಟ್ಟಡ ಇವರ ಕೊಡುಗೆ. ಸಂಘದ ಅಂದಿನ ಅಧ್ಯಕ್ಷರಾಗಿದ್ದ ದಿ. ಶ್ರೀ ಐ.ಎಂ. ಜಯರಾಮ ಶೆಟ್ಟಿಯವರೊಂದಿಗೆ ವಿಚಾರಿಸಿ ಶಾಲೆಗೆ ಎಷ್ಟು ದೊಡ್ಡ ಕಟ್ಟಡ, ಎಷ್ಟು ಕ್ಲಾಸ್ ರೂಂ ಇತ್ಯಾದಿಗಳನ್ನು ತಿಳಿದುಕೊಂಡು ಕೇವಲ 3 ತಿಂಗಳಲ್ಲಿ ಈ ಬೃಹತ್ ಕೆಲಸವನ್ನು ಮುಗಿಸಿದರು. ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲೇ ಈ ಕಟ್ಟಡ ತಯಾರಾಗಬೇಕೆಂಬ ಆಸೆಯಿಂದ ಯಾವ ಕುಂದು ಕೊರತೆ ಇಲ್ಲದೇ, ಗುಣ ಮಟ್ಟದಲ್ಲಿ ಯಾವುದೇ ರಾಜಿ ಇಲ್ಲದ ಹಾಗೆ ಕಟ್ಟಡ ನಿರ್ಮಾಣವಾಯಿತು. ಆಗಲೇ 70 ವರ್ಷ ಪ್ರಾಯ ದಾಟಿದ ಶ್ರೀ ಶೆಟ್ಟರು ಖುದ್ದು ತಾವೇ ನಿಂತು




ನಿರ್ಮಾಣದ ಮೇಲ್ವಿಚಾರಣೆ ನಡೆಸುತ್ತಿದ್ದುದು ಎಲ್ಲಾ ಸದಸ್ಯರಿಗೂ ರೋಮಾಂಚನಕಾರಿ ಅನುಭವ. ಯಾವುದೇ ಕೆಲಸ ಮಾಡಿದರೂ ಅದು ಉತ್ತಮ ಗುಣಮಟ್ಟದ್ದಾಗಿರಬೇಕು, ಅದರಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದೆಂಬುದು ಅವರ ಭಾವನೆ ಹಾಗೂ ದೃಢ ನಂಬಿಕೆಯಾಗಿತ್ತು. ಅಂತಹ ಕೆಲಸಕ್ಕೆ ನೂರಕ್ಕೆ ನೂರರಷ್ಟು ಗಮನ ಹರಿಸುವುದು ಅವರ ಸ್ವಭಾವವಾಗಿತ್ತು. ಇದೆಲ್ಲದರ ಪರಿಶ್ರಮವಾಗಿ ಸುಮಾರು 4 ಸಾವಿರಕ್ಕೂ ಅಧಿಕ ಮಕ್ಕಳು



ಓದುತ್ತಿರುವ ಬಂಟ್ಸ್ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಇಂದು ಬೆಂಗಳೂರು ವಿಜಯನಗರದಲ್ಲಿ ತಲೆ ಎತ್ತಿ ನಿಂತಿದ್ದಲ್ಲದೇ ಅವರ ಅಧ್ಯಕ್ಷತೆಯಲ್ಲಿ ಶಾಲೆಯು ಅತ್ಯುತ್ತಮ ಹೆಸರು ಪಡೆದು ವಿಜಯನಗರ ಪರಿಸರದಲ್ಲೇ ಒಂದು ಉತ್ತಮ ಶೈಕ್ಷಣಿಕ ಸಂಸ್ಥೆಯೆಂದು ಪರಿಗಣಿಸಲ್ಪಟ್ಟಿದೆ.

ಸುಮಾರು 15-20 ವರ್ಷಗಳ ಹಿಂದಿನ ಮಾತು. ಆರ್.ಎನ್.ಎಸ್ ಗ್ರೂಪಿನ ಕ್ಯಾಲೆಂಡರ್‌ಗೋಸ್ಕರ ವಿನ್ಯಾಸದ ಕೆಲಸ ನಡೆಯುತ್ತಿತ್ತು. ಈ ಕೆಲಸವನ್ನು ವಹಿಸಿಕೊಂಡ ಸಂಸ್ಥೆ ನನ್ನನ್ನು ಸಂಪರ್ಕಿಸಿ ಇದಕ್ಕೆ ಸಹಾಯ ಕೇಳಿದರು. ವಿನ್ಯಾಸ ಮತ್ತು ಜಾಹೀರಾತು




ಸಂಸ್ಥೆ ನಡೆಸುತ್ತಿರುವ ನನಗೂ ಇದೊಂದು ಆಸಕ್ತಿದಾಯಕ ಕೆಲಸವಾಗಿ ಕಂಡಿತು. ಇದರ ಸಲುವಾಗಿ ಫೋಟೋಗ್ರಾಫಿ ಮಾಡಲು ನಾವು ಮುರುಡೇಶ್ವರಕ್ಕೆ ತೆರಳಿದೆವು. ಆ ಸಂಜೆ ಶ್ರೀಯುತ ಶೆಟ್ಟರನ್ನು ಭೇಟಿ ಮಾಡುವ ಅವಕಾಶವೂ ದೊರಕಿತು. ಎಂದಿನಂತೆ ನಮ್ಮನ್ನು ಆತ್ಮೀಯವಾಗಿ ವಿಚಾರಿಸಿ, ನಿಮಗೆ ಇನ್ನೇನಾದರೂ ಬೇಕಿದ್ದರೆ ಹೇಳಿ ಎಂದರು. ನಾವು ಸಾಮಾನ್ಯವಾಗಿ ಇಂತಹ ಕೆಲಸಕ್ಕೆ ಹೋಗುವಾಗ ಫೋಟೊಗ್ರಾಫಿಗೆ ಬೇಕಾದ ಬೆಳಕು ಮತ್ತು ಇತರ ಸಲಕರಣೆಗಳನ್ನು ಕೂಲಂಕುಷವಾಗಿ ಚರ್ಚಿಸಿ, ಎಲ್ಲವನ್ನೂ ತೆಗೆದುಕೊಂಡು ಹೋಗುವುದು ವಾಡಿಕೆ. ಆದರೆ ಆ ದಿನ ಮುರುಡೇಶ್ವರಕ್ಕೆ ಹೋಗಿ ನೋಡಿದಾಗ ಇನ್ನೂ ಹೆಚ್ಚಿನ ಬೆಳಕಿನ ವ್ಯವಸ್ಥೆ ಬೇಕಾಗಿರುವುದು ನಮ್ಮ ಗಮನಕ್ಕೆ ಬಂತು. ಹೇಗೂ ಶೆಟ್ಟರು ಇನ್ನೇನಾದರೂ ಬೇಕಾ ಎಂದು ಕೇಳಿದ್ದಾರೆ, ಇದರ ವಿಚಾರ ಅವರಿಗೆ ತಿಳಿಸಿದಾಗ ಅವರು ಅದು ಏನು? ಯಾವ ರೀತಿಯದ್ದು ಎಂಬೆಲ್ಲಾ ಪ್ರಶ್ನೆಗಳನ್ನು ಕೇಳಿದರು. ಸಾಮಾನ್ಯವಾಗಿ ಎಲ್ಲಾ ಸ್ಟುಡಿಯೋಗಳಲ್ಲಿ ಸನ್‌ಗನ್ ಎನ್ನುವ ಫ್ಲಾಶ್ ಲೈಟ್ ಸಿಗುತ್ತದೆ. ಆದ್ದರಿಂದ ನಾವು ಅವರಲ್ಲಿ ವಿನಂತಿ ಮಾಡಿಕೊಂಡೆವು ಇಲ್ಲೆಲ್ಲಾದರೂ ಫೋಟೋ ಸ್ಟುಡಿ0ಯೋ ಇದ್ದರೆ ಎಷ್ಟಾದರೂ ಸನ್‌ಗನ್‌ಗಳು ಸಿಕ್ಕಿದ್ದರೆ ಒಳ್ಳೆಯದಿತ್ತು ಎಂದು. ತಕ್ಷಣ ಅವರು ಏನು ಮಾಡಿದರೋ ಗೊತ್ತಿಲ್ಲ, ರಾತ್ರಿ ಒಳಗೆ ಸುಮಾರು 200 ಸನ್‌ಗನ್‌ಗಳು ಅಲ್ಲಿ ಬಂದು ಬಿದ್ದವು. ನನಗೆ ಅನಿಸಿತ್ತು, ಸುತ್ತ ಮುತ್ತ ಇದ್ದ ಎಲ್ಲಾ ಸ್ಟುಡಿಯೋಗಳಿಗೂ ಇವರ ಕರೆ ಹೋಗಿರಬಹುದು ಎಂದು. ನಂತರ ನಮ್ಮ ಮಾರನೆ ದಿನ ಬೆಳಿಗ್ಗೆಯ ಕಾರ್ಯಕ್ರಮಗಳನ್ನು ಅವರಿಗೆ ತಿಳಿಸಿದೆವು. ನಮಗೆ ಸಹಾಯ ಮಾಡಲಿಕ್ಕೆ 2–3 ಜನರನ್ನು ಅವರು ನಮ್ಮೊಂದಿಗೆ ಬಿಟ್ಟಿದ್ದರು.

ಶಿವನ ಪ್ರತಿಮೆಯ ಸಮೀಪ ಬೆಳಗ್ಗಿನ ಜಾವದಲ್ಲಿ ಫೋಟೋ ತೆಗೆಯಲು ನಾವು ಬೆಳಿಗ್ಗೆ 5 ಗಂಟೆಯ ಒಳಗೇ ಅಲ್ಲಿ ಸೇರಿದ್ದೆವು. ನಮ್ಮ ಕ್ಯಾಮರಾ ಸ್ಟ್ಯಾಂಡ್ ಮತ್ತಿತ್ತರ ಸಲಕರಣೆಗಳನ್ನು ಜೋಡಿಸಿ ತಯಾರಾಗಿದ್ದೆವು. ತಕ್ಷಣ ಅಲ್ಲೇ ಸ್ವಲ್ಪ ದೂರದಲ್ಲಿ ಯಾರೋ ಇದ್ದ ಹಾಗೆ ನಮಗೆ ಗೋಚರವಾಯಿತು.



ಸರಿಯಾಗಿ ಬೆಳಕಿಲ್ಲ, ಸೂರ್ಯ ಮೂಡಿರಲಿಲ್ಲ.... ಇದ್ಯಾರು ಈ ಹೊತ್ತಿಗೆ ಎಂದು ನಾವು ನೋಡುವಾಗ ಶ್ರೀ ಆರ್. ಎನ್. ಶೆಟ್ಟಿಯವರು ನಮ್ಮ ಹತ್ತಿರ ಬಂದರು. ಎಂತಹ ಆಶ್ಚರ್ಯ, ಬೆಳಿಗ್ಗೆ 5 ಗಂಟೆಗೆ ಶ್ರೀ ಶೆಟ್ಟರು ಅಲ್ಲಿಗೆ ಬಂದಿದ್ದರು. ಬಹಳ ತಮಾಷೆಯಾಗಿ ಅವರು ಹೇಳಿದ ಮಾತುಗಳು: ನೀವೆಲ್ಲಾ ಏನು ಮಾಡುತ್ತೀರಿ, ಹೇಗೆ ಈ ಕೆಲಸ ನಡೆಯುತ್ತದೆ, ಇದನ್ನೆಲ್ಲಾ ಕಲಿಯಲು ನನಗೂ ಒಂದು ಅವಕಾಶ, ಆದ್ದರಿಂದ ಬೆಳಿಗ್ಗೆನೇ ಇಲ್ಲಿಗೆ ಬಂದೆ ಎಂದು ಬಹಳ ಆತ್ಮೀಯವಾಗಿ ಹೇಳಿದರು. ಅವರ ಆ ಸ್ಫೂರ್ತಿದಾಯಕ ನಡೆ ನಮ್ಮನ್ನೂ ಬೆರಗುಗೊಳಿಸಿದ್ದಲ್ಲದೇ ನಮ್ಮನ್ನೆಲ್ಲಾ ಇನ್ನೂ ಒಳ್ಳೆಯ ಗುಣ ಮಟ್ಟದ ಕೆಲಸ ಮಾಡಲು ಪ್ರೇರಣೆಯಾಯಿತು.



ಶ್ರೀಯುತ ಆರ್.ಎಸ್. ಶೆಟ್ಟಿಯವರು ಅತ್ಯಂತ ಸ್ನೇಹಜೀವಿ, ಸಹೃದಯಿ ಹಾಗೂ ನಿಗರ್ವಿ. ಆಗಸದೆತ್ತರಕ್ಕೆ ಬೆಳೆದರೂ ಅವರ ನಡೆ ನುಡಿ ತೀರಾ ಸರಳವಾಗಿತ್ತು. ಶ್ರೀಮಂತಿಕೆಯ ಅಹಂ ಅವರಲ್ಲಿ ಎಂದೂ ಇರಲಿಲ್ಲ. ಕರ್ನಾಟಕ ಗುತ್ತಿಗೆದಾರರ ವಲಯದಲ್ಲಿ ಅತ್ಯಂತ ಸಂಚಲನ ಮೂಡಿಸಿದ ಹೆಸರು ಅವರದ್ದು. ಅಂತಹ ಶಿಸ್ತು, ಬದ್ಧತೆ, ಪ್ರಾಮಾಣಿಕತೆಯಿಂದ ಇರುವವರು ಬಹಳ ವಿರಳ. ದೈತ್ಯ ಉದ್ಯಮಿ0ಯಾಗಿ ಅವರು ಬೆಳೆದಿರುವುದು ಅವರ ಸತತ ಪರಿಶ್ರಮ ಹಾಗೂ ಅದರ ಹಿಂದೆ ಅವರ ಬೆವರ ಹನಿಗಳು.


ಬಂಟ ಸಮುದಾಯಕ್ಕೆ ಅವರ ಕೊಡುಗೆ ಅಪಾರ. ಅದರಲ್ಲೂ ಬೆಂಗಳೂರು ಬಂಟರ ಸಂಘಕ್ಕೆ ಅವರು ಮಾಡಿದ ಬೃಹತ್ ಮೊತ್ತದ ದಾನ, ಅವರ ಮಾರ್ಗದರ್ಶನ, ಆದರ್ಶ, ಅವರು ತುಂಬಿದ ಧೈರ್ಯ, ಸಂಘದ ಆಡಳಿತ ಮಂಡಳಿಯವರನ್ನು ಹುರಿದುಂಬಿಸುವ ಕೆಲಸವಾಗಲೀ, ಇದೆಲ್ಲದರಿಂದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಇಂದು ಈ ಎತ್ತರಕ್ಕೆ ಬೆಳೆದಿದೆಯಲ್ಲದೇ, ತಾವರೆಕೆಯ ಯಲಚಗುಪ್ಪೆಯಲ್ಲಿ ವಿದ್ಯಾನಿಕೇತನ–2 ಎಂಬ ಹೆಸರಿನ ಬೃಹತ್ ಸಂಕೀರ್ಣ ಸುಮಾರು 10 ಎಕರೆ ಜಮೀನಿನಲ್ಲಿ ತಲೆ ಎತ್ತುವಂತಾಯಿತು.

ಬೆಂಗಳೂರು ಬಂಟರ ಸಂಘ ದಿ. ಡಾ। ಆರ್.ಎನ್. ಶೆಟ್ಟಿಯವರು ಹಾಗೂ ಅವರ ಕುಟುಂಬದವರಿಗೆ ಸದಾ ಋಣಿಯಾಗಿರುತ್ತದೆ. ಬರುವ ಮೇ 1, 2022ರಂದು ಸಂಘದ ವಿಜಯನಗರದ ಆರ್.ಎನ್.ಎಸ್. ವಿದ್ಯಾನಿಕೇತನದ ಸಂಕೀರ್ಣದಲ್ಲಿ ಲೋಕಾರ್ಪಣೆಗೊಳ್ಳಲಿರುವ ಅವರ ಪುತ್ಥಳಿ ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ನಾವೆಲ್ಲರೂ ಸೇರಿ ಅವರಿಗೆ ಸಲ್ಲಿಸುವ ಗೌರವ ಪೂರ್ವಕ ನಮನಗಳಾಗಿವೆ.




ಡಾ. ಆರ್.ಎನ್. ಶೆಟ್ಟಿಯವರು ಬಂಟ ಸಮುದಾಯ ಕಂಡ ಅಗ್ರಮಾನ್ಯ ನಾಯಕ ಹಾಗೂ ಕೊಡುಗೈ ದಾನಿ. ಬಂಟ ಸಮುದಾಯದ ಬಗ್ಗೆ ಅಪರಿಮಿತ ಪ್ರೀತಿಯನ್ನು ಹೊಂದಿದ್ದ ದಿವಂಗತ ಆರ್.ಎನ್. ಶೆಟ್ಟಿಯವರು ಬೆಂಗಳೂರು ಬಂಟರ ಸಂಘದ ಅಭ್ಯುದಯಕ್ಕೆ, ಪ್ರಮುಖವಾಗಿ ಶೈಕ್ಷಣಿಕ ಸೇವೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಸಲ್ಲಿಸಿದ ಸೇವೆ ಅನನ್ಯವಾದುದು. ಅವರ ದೂರದರ್ಶಿತ್ವ ಮತ್ತು ಪ್ರೋತ್ಸಾಹದಿಂದಲೇ ಬಂಟರ ಸಂಘವು ಒಂದು ಉನ್ನತವಾದ ವಿದ್ಯಾ ಸಂಸ್ಥೆಯನ್ನು ಹೊಂದುವಲ್ಲಿ ಯಶಸ್ವಿಯಾಗಿದೆ. ಬಂಟ ಸಮುದಾಯ ಕಂಡ ಮಹಾನ್ ಚೇತನದ ಪ್ರತಿಮೆಯನ್ನು ಸಂಘದ ವಿದ್ಯಾ ಸಂಸ್ಥೆಯ ಆವರಣದಲ್ಲಿ ಅನಾವರಣಗೊಳಿಸುತ್ತಿರುವುದು ಸದಸ್ಯರೆಲ್ಲರಿಗೂ ಸ್ಫೂರ್ತಿಯಾಗಲಿದೆ.

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು




ಬಂಟ ಸಮುದಾಯದ ಧೀಮಂತ ನಾಯಕ, ಹೆಸರಾಂತ ಉದ್ಯಮಿ, ಸಹಸ್ರಾರು ಜನರಿಗೆ ಉದ್ಯೋಗ ನೀಡಿ, ಜೀವನೋಪಾಯ ಕಲ್ಪಿಸಿದ ಮಹಾನ್ ವ್ಯಕ್ತಿ ದಿ. ಡಾ. ಆರ್.ಎನ್. ಶೆಟ್ಟಿಯವರು. ನಮ್ಮ ಸಂಘಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿ ಸಂಘದ ಶೈಕ್ಷಣಿಕ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದ ಮಹಾನ್ ವ್ಯಕ್ತಿಯ ಪ್ರತಿಮೆಯನ್ನು ಸಂಘದಲ್ಲಿ ಅನಾವರಣಗೊಳಿಸುವ ಮೂಲಕ ಅವರಿಗೆ ಗೌರವ ನಮನ ಸಲ್ಲಿಸುತ್ತಿದ್ದೇವೆ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ, ಬಂಟರ ಸಂಘ ಬೆಂಗಳೂರು



ಡಾ. ಆರ್. ಎನ್. ಶೆಟ್ಟಿಯವರು ಔದ್ಯಮಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದ ಧ್ರುವತಾರೆ, ಬಂಟ ಸಮುದಾಯದ ಅಗ್ರ ಪಂಕ್ತಿಯ ನಾಯಕ, ಔದ್ಯಮಿಕವಾಗಿ ಯಶಸ್ಸಿನ ಉತ್ತುಂಗಕ್ಕೇರಿದರೂ ಸರಳ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು ಸಮುದಾಯಕ್ಕೆ ಮಾದರಿಯಾಗಿ ನಿಂತ ಮಹಾನ್ ನಾಯಕರು. ಬಂಟ ಸಮುದಾಯದ ಏಳಿಗೆಗೆ ಡಾ. ಆರ್.ಎನ್. ಶೆಟ್ಟಿಯವರು ನೀಡಿದ ಕೊಡುಗೆ ಅತ್ಯಂತ ಮಹತ್ವದ್ದು. ಬೆಂಗಳೂರು ಮಹಾನಗರದಲ್ಲಿ ಬಂಟರ ಸಂಘವು ಶೈಕ್ಷಣಿಕವಾಗಿ ತನ್ನ ಅಸ್ತಿತ್ವ ಕಂಡುಕೊಳ್ಳುವಲ್ಲಿ ಅವರ ಕೊಡುಗೆ ಅಪಾರ. ಇಂತಹ ಮೇರು ವ್ಯಕ್ತಿಯ ಪ್ರತಿಮೆಯನ್ನು ಸಂಘದ ಆವರಣದಲ್ಲಿ ಪ್ರತಿಷ್ಠಾಪಿಸುತ್ತಿರುವುದು ಮಹಾನ್ ಚೇತನಕ್ಕೆ ನಾವು ಸಲ್ಲಿಸುತ್ತಿರುವ ಗೌರವ.

**ಕೆ. ಪ್ರಕಾಶ್ ಶೆಟ್ಟಿ**
ಚೇರ್‌ಮೆನ್, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಆಡಳಿತ ಮಂಡಳಿ



ಶೆಟ್ಟರೆಂದರೆ ಆರ್. ಎನ್. ಶೆಟ್ಟರು, 'ಸಿರಿ ಬಂದಾಗ ಕರೆದು ದಾನವ ಮಾಡು'....ದಾಸವಾಣಿ. ಹಿರಿಯರು ಬಂಟ ಸಮಾಜವನ್ನು ಶ್ರೀಮಂತಗೊಳಿಸಲು ಶೈಕ್ಷಣಿಕ ಕ್ರಾಂತಿಯ ಕಿಡಿಯನ್ನು ಹೊತ್ತಿಸಿ ಬೆಳಗಿಸಿ, ಧಾರ್ಮಿಕ ಕ್ಷೇತ್ರ, ಕೈಗಾರಿಕಾ ರಂಗದಲ್ಲಿ ಅಪ್ರತಿಮ ಸಾಧನೆ ಸಫಲತೆಗಳೊಂದಿಗೆ, ದಾನ ಧರ್ಮಗಳಿಗೆ ಆದ್ಯತೆ ನೀಡಿ ಸರಳ ಸಜ್ಜನಿಕೆಯ ಆರ್.ಎನ್.ಎಸ್ ಜೊತೆ ಶಾಲಾಭಿವೃದ್ಧಿ ಕೈಂಕರ್ಯಕ್ಕೆ ಕೈ ಜೋಡಿಸಿದ ಆತ್ಮ ತೃಪ್ತಿಯೊಂದಿಗೆ ಕಳೆದ ದಿನಗಳು ಸದಾ ಹಚ್ಚ ಹಸುರು. ಪ್ರಾತಃ ಸ್ಮರಣೀಯರ ಪುತ್ಥಳಿ (ವಿಗ್ರಹ) ನಮಗೆಲ್ಲ ಸ್ಫೂರ್ತಿಯಾಗಿರಲಿ.

**ಚಂದ್ರಹಾಸ ರೈ ಡಿ.**
ನಿಕಟಪೂರ್ವ ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು



"The Key to life is not accumulation, it is contribution"

- Stephen Convey

Late Dr. R.N. Shetty has always been a great contributor to the betterment of the Society. His contribution towards the Bunts Sangha school when we needed financial support has made a big difference in the education field. Today we are proud to say that Bunts Sangha school is one of the best schools in the area with all-round development. I would like to remember him for his heartwarming donations and support to education.

**Dr. M.T. Rai**

Past President, Bunts Sangha Bangalore




Dr RN Shetty has been a great personality who has immensely contributed for the growth of Bunts Sangha in Bangalore. His initial donation of Rs. 5laks was tremendously helpful in the construction of auditorium and gave momentum for the community activities in Bangalore.

His foresight and encouragement made it possible for he Sangha to develop educational institutions. He not only made very generous contributions but also took keen interest in personally supervising the construction of school building in a record time. He was a pillar of strength in developing the school into a well-respected institution with his active participation as Chairman of Governing Council. Installing Dr Shetty's bust in Sangha complex will be a humble way of recognizing his great services, and it will be a constant inspiration for the members of Sangha.

**Harish Kumar Shetty**

Past President, Bunts Sangha Bangalore



It is appropriate that our Sangha is installing life size bust of late Sri R.N. Shetty, a doyen of our community, who is an institution builder, liberal donor for genuine causes. But for him our first school building would not have come up for which the entire funding was borne by him in the year 2001. He also built a chain of educational institution in his brand name. As a chairman of Governing Council a second school building was also constructed. We need to remain even grateful to him, as a community.

**BLN Hegde**

Past President, Bunts Sangha Bangalore



ಬಂಟ ಸಮುದಾಯದ ಹೆಸರಾಂತ ಉದ್ಯಮಿ, ಬೆಂಗಳೂರು ಬಂಟರ ಸಂಘದ ಪ್ರಮುಖ ದಾನಿ, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಚೇರ್‌ಮೆನ್‌ರಾಗಿದ್ದ ದಿ. ಡಾ.ಆರ್.ಎನ್.ಶೆಟ್ಟಿಯವರ ಪ್ರತಿಮೆಯನ್ನು ಸಂಘದಲ್ಲಿ ಅನಾವರಣಗೊಳಿಸುವ ಮೂಲಕ ಅವರಿಗೆ ಗೌರವ ಸಲ್ಲಿಸುತ್ತಿರುವುದು ಸಂತಸ ತರುವ ವಿಷಯ. ಶಾಲಾಡಳಿತ ಮಂಡಳಿಯ ಚೇರ್‌ಮೆನ್‌ರಾಗಿದ್ದ ಅವಧಿಯಲ್ಲಿ ಶಾಲಾಭಿವೃದ್ಧಿ ಬಗ್ಗೆ ಅತೀವ ಕಾಳಜಿ ವಹಿಸಿ ಶಾಲೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಶ್ರಮಿಸಿದ ಹಿರಿಯರಿಗೆ ನಮನಗಳು.

**ಕೆ. ಭಗವಾನ್‌ದಾಸ್ ರೈ**

ಮಾಜಿ ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು



ನಮ್ಮ ಸಮುದಾಯ ಕಂಡ ಧೀಮಂತ ನಾಯಕ, ಕೊಡುಗೈ ದಾನಿ, ಬೆಂಗಳೂರು ಬಂಟರ ಸಂಘದ ಡೋನರ್ ಟ್ರಸ್ಟಿಯಾಗಿದ್ದ ದಿ. ಡಾ. ಆರ್.ಎನ್. ಶೆಟ್ಟಿಯವರ ಪ್ರತಿಮೆಯನ್ನು ಸಂಘದ ಶಾಲೆಯ ಆವರಣದಲ್ಲಿ ಅನಾವರಣಗೊಳಿಸುತ್ತಿರುವುದು ಸೂಕ್ತವಾಗಿದೆ. ಶಾಲಾ ಕಟ್ಟಡಕ್ಕೆ ಬೃಹತ್ ದೇಣಿಗೆ ನೀಡುವುದರೊಂದಿಗೆ ಸ್ವತ: ಮುಂದೆ ನಿಂತು ಸುಸಜ್ಜಿತ ಕಟ್ಟಡವನ್ನು ನಿರ್ಮಿಸುವಲ್ಲಿ ಡಾ. ಆರ್. ಎನ್. ಶೆಟ್ಟಿಯವರ ಪಾತ್ರ ಹಿರಿದಾಗಿತ್ತು. ಹಿರಿಯರು ಕಟ್ಟಿ ಬೆಳೆಸಿದ ವಿದ್ಯಾಸಂಸ್ಥೆ ಉತ್ತರೋತ್ತರ ಯಶಸ್ಸನ್ನು ಕಾಣಲಿ ಎಂಬ ಶುಭ ಹಾರೈಕೆಗಳು.

**ಅಮರನಾಥ ಹೆಗ್ಡೆ ಟಿ.**

ಮಾಜಿ ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆ





ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯನ್ನು ದಿನಾಂಕ 27.03.2022ರಂದು ಸಂಜೆ 5 ಗಂಟೆಗೆ ಸಂಘದ ಆವರಣದಲ್ಲಿ ಆಚರಿಸಲಾಯಿತು. ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ 2020–21 ನೇ ಸಾಲಿನ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸಾಂಸ್ಕೃತಿಕ ಸಮಿತಿಯು ವತಿಯಿಂದ ಬಹುಮಾನಗಳನ್ನು ವಿತರಿಸಲಾಯಿತು. ಕ್ರೀಡಾ ವಿಭಾಗದ ವತಿಯಿಂದ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಕ್ರೀಡಾ ಸಾಧನಾ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸಲಾಯಿತು. ಇದೇ ಸಂದರ್ಭದಲ್ಲಿ ಮೋಟಾರ್ ಸೈಕಲ್ ರೇಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಾಧನೆಗಾಗಿ ಶ್ರೀ ಅನಿಶ್ ದಾಮೋದರ ಶೆಟ್ಟಿ, ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸಾಧನೆಗಾಗಿ ಶ್ರೀ ಶಶಾಂಕ್ ಜೆ. ರೈ, ವಾಲಿಬಾಲ್ ಪಂದ್ಯಾವಳಿಯಲ್ಲಿನ ರಾಷ್ಟ್ರೀಯ ಮಟ್ಟದ ಸಾಧನೆಗಾಗಿ ಶ್ರೀ ಸುದೀಪ್ ಶೆಟ್ಟಿ ಮತ್ತು ಕ್ರಿಕೆಟ್ ಕ್ಷೇತ್ರದಲ್ಲಿನ ರಾಜ್ಯ ಮಟ್ಟದ ಸಾಧನೆಗಾಗಿ ಶ್ರೀ ಶಿಖರ್ ಆರ್. ಶೆಟ್ಟಿ ಇವರನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ವತಿಯಿಂದ ವಿವಿಧ ಕ್ಷೇತ್ರಗಳ ಪ್ರತಿಭಾನ್ವಿತರಿಗೆ ದತ್ತಿನಿಧಿ ಪ್ರಶಸ್ತಿಗಳನ್ನು ಹಾಗೂ ಪ್ರತಿಭಾ ಪುರಸ್ಕಾರವನ್ನು ನೀಡಿ ಪುರಸ್ಕರಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ಸರಕಾರದ ಮಾಜಿ ಸಚಿವರಾದ ಶ್ರೀ ಬಿ. ರಮಾನಾಥ ರೈಯವರಿಗೆ ದಿ. ಡಾ. ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿಯನ್ನು ಹಾಗೂ ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಉದ್ಯಮಿಗಳಾದ ಶ್ರೀ ಸರ್ವೋತ್ತಮ ಶೆಟ್ಟಿ ಇವರಿಗೆ ದಿ. ಡಾ. ದರ್ಬೆ ಕೃಷ್ಣಾನಂದ ಚೌಟ ಸ್ಮಾರಕ ಸಾಂಸ್ಕೃತಿಕ ಸಾಧಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



ಶ್ರೀ ಬಿ. ರಮಾನಾಥ ರೈಯವರು ಪ್ರಶಸ್ತಿ ಸ್ವೀಕರಿಸಿ ಮಾತನಾಡಿ ಬಂಟ ಸಮುದಾಯ ಎಲ್ಲಾ ಕ್ಷೇತ್ರಗಳಲ್ಲೂ ಗುರುತಿಸಿಕೊಂಡಿದೆ. ಜೊತೆಗೆ ಎಲ್ಲಾ ಸಮಾಜದ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾಗಿದೆ. ಆದರೂ ಕೂಡ



ಬಂಟ ಸಮುದಾಯದಲ್ಲೂ ಸಾಕಷ್ಟು ಮಂದಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿದ್ದಾರೆ. ಅವರಿಗೆ ಸೂಕ್ತ ನ್ಯಾಯ ಸಿಗಬೇಕು. ಆದ್ದರಿಂದ ಬೆಂಗಳೂರು ಬಂಟರ ಸಂಘದ ಮೂಲಕ ಬಂಟ ಸಮುದಾಯವನ್ನು ಕೇಂದ್ರ ಹಿಂದುಳಿದ ವರ್ಗಕ್ಕೆ ಸೇರಿಸಬೇಕು ಎಂದು ಮನವಿ ಮಾಡಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾರತ ಸರಕಾರದ ಮಾನ್ಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಖಾತೆ ಸಚಿವರಾದ ಶ್ರೀ ಎ. ನಾರಾಯಣ ಸ್ವಾಮಿಯವರು, ಮುಂಬಯಿಯ ಇಂಡಿಯನ್ ಬಂಟ್ಸ್ ಛೇಂಬರ್ ಆಫ್ ಕಾಮರ್ಸ್ & ಇಂಡಸ್ಟ್ರಿ ಇದರ ಅಧ್ಯಕ್ಷರಾದ ಶ್ರೀ ಕೆ.ಸಿ. ಶೆಟ್ಟಿ ಮತ್ತು ಮುಂಬೈ ಬಂಟರ ಸಂಘದ ಉಪಾಧ್ಯಕ್ಷರಾದ ಶ್ರೀ ಉಳ್ತೂರು ಮೋಹನದಾಸ ಶೆಟ್ಟಿಯವರು ಭಾಗವಹಿಸಿದ್ದರು.

ಮುಖ್ಯ ಅತಿಥಿ ಸನ್ಮಾನ್ಯ ಎ. ನಾರಾಯಣ ಸ್ವಾಮಿಯವರು ಮಾತನಾಡಿ, ಬೆಂಗಳೂರು ಬಂಟರ ಸಂಘದ ಕಾರ್ಯಗಳ ಬಗ್ಗೆ ಮೆಚ್ಚಿಗೆ ವ್ಯಕ್ತ ಪಡಿಸುತ್ತಾ ಸಂಘದ ಬೇಡಿಕೆಗಳನ್ನು ಸೂಕ್ತ ರೀತಿಯಲ್ಲಿ ಈಡೇರಿಸುವ ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ವಹಿಸಿದರು. ಸಂಘದ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿಯವರು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಅತಿಥಿ ಅಭ್ಯಾಗತರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರ ಧನ್ಯವಾದ ಸಮರ್ಪಣೆಯೊಂದಿಗೆ ಸಭಾಕಾರ್ಯಕ್ರಮವು ಮುಕ್ತಾಯವಾಯಿತು.

ಈ ಕಾರ್ಯಕ್ರಮದಲ್ಲಿ ಕ್ರೀಡಾ ಸಮಿತಿ ಚೇರ್‌ಪರ್ಸನ್ ಶ್ರೀ ರಾಧಾಕೃಷ್ಣ ಶೆಟ್ಟಿ, ಸಾಂಸ್ಕೃತಿಕ ಸಮಿತಿ ಚೇರ್‌ಪರ್ಸನ್ ಶ್ರೀ ವಿಜಯ ಶೆಟ್ಟಿ ಹಾಲಾಡಿ ಹಾಗೂ ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿಯವರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಸಮಿತಿ ಆಯೋಜಿಸಿದ್ದ ಮಜಾಭಾರತ ತಂಡವರಿಂದ ಹಾಸ್ಯ, ನೃತ್ಯ, ಮನೋರಂಜನಾ ಕಾರ್ಯಕ್ರಮಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀಮತಿ ರೇವತಿ ಶೆಟ್ಟಿಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಸದಸ್ಯ ಬಾಂಧವರಿಗೆ ಹಾಗೂ ಅತಿಥಿಗಳಿಗೆ ಶುಚಿ-ರುಚಿಯಾದ ಸಹಭೋಜನ ಏರ್ಪಡಿಸಲಾಗಿತ್ತು.

# ಬಂಟರ ಸಂಘ ಬೆಂಗಳೂರು – ಸಮಾಜ ಸೇವಾ ಸಮಿತಿ ಮತ್ತು ಬಂಟ್ಸ್ ಸೇವಾದಳ ಸೇವಾ ಚೇತನ – II

ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಆಶ್ರಯದಲ್ಲಿ ಸೇವಾ ಚೇತನ II ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಉಚಿತ ಅರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಕ್ಯಾನ್ಸರ್ ಸ್ಕ್ರೀನಿಂಗ್ ಟೆಸ್ಟ್, ನೇತ್ರದಾನ ನೋಂದಾವಣೆ, ಆಧಾರ್ ಕಾರ್ಡ್ ಸೌಲಭ್ಯ, ಸರಕಾರದ ವಿವಿಧ ಸೌಲಭ್ಯಗಳ ಕಾರ್ಡು, ವಿವಿಧ ಮಾಹಿತಿ ಕಾರ್ಯಗಾರಗಳು, ಸೇವಾ ಚೇತನ ಪುರಸ್ಕಾರ ಸೇರಿದಂತೆ ಹಲವಾರು ಜನೋಪಯೋಗಿ ಕಾರ್ಯಕ್ರಮಗಳು ನಡೆದವು.

ಕರ್ನಾಟಕ ಸರಕಾರದ ಅಬಕಾರಿ ಇಲಾಖಾ ಸಚಿವರಾದ ಸನ್ಮಾನ್ಯ ಶ್ರೀ ಕೆ. ಗೋಪಾಲಯ್ಯನವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಮಾಜ ಸೇವಾ ಸಮಿತಿಯ ಉಚಿತ ಆರೋಗ್ಯ ತಪಾಸಣಾ ಶಿಬಿರದ ಆಯೋಜನೆ ಮತ್ತು ಸಂಘದ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿ ಮುಂದಿನ ದಿನಗಳಲ್ಲಿ ತಮ್ಮ ಕ್ಷೇತ್ರದಲ್ಲಿಯೂ ಇದೇ ತರಹದ ಶಿಬಿರಗಳನ್ನು ಜಂಟಿಯಾಗಿ ಅಯೋಜಿಸುವಂತೆ ಕೇಳಿದರು.

### ನೆತ್ತರ ನೆರವು – ರಕ್ತದಾನ ಶಿಬಿರ

ಬೆಂಗಳೂರಿನ ನಾರಾಯಣ ಹೃದಯಾಲಯ ರಕ್ತನಿಧಿಯ ಸಹಯೋಗದೊಂದಿಗೆ ನೆತ್ತರ ನೆರವು ರಕ್ತದಾನ ಶಿಬಿರ ಅಯೋಜಿಸಲಾಗಿತ್ತು. ದಾನಿಗಳಿಂದ 180 ಯುನಿಟ್ ರಕ್ತವನ್ನು ಸಂಗ್ರಹಿಸಿಲಾಗಿದ್ದು, ಮಾನ್ಯ ಸಚಿವರಾದ ಗೋಪಾಲಯ್ಯನವರು ಸಾಂಕೇತಿಕವಾಗಿ ರಕ್ತನಿಧಿಗೆ ಹಸ್ತಾಂತರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಇದೇ ಸಂಧರ್ಭದಲ್ಲಿ ಎಲ್ಲಾ ರಕ್ತದಾನಿಗಳಿಗೆ ಪ್ರಮಾಣಪತ್ರ ವಿತರಿಸಿ ಸಮಾಜಮುಖಿ ಕಾರ್ಯದಲ್ಲಿ ಭಾಗವಹಿಸಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು.



### ಉಚಿತ ಆರೋಗ್ಯ ತಪಾಸಣೆ

ಬೆಂಗಳೂರಿನ ಪ್ರತಿಷ್ಠಿತ ಆಸ್ಪತ್ರೆಗಳ ಸಹಯೋಗದೊಂದಿಗೆ ಉನ್ನತ ಮಟ್ಟದ ಅರೋಗ್ಯ ತಪಾಸಣೆ ಕಾರ್ಯಕ್ರಮದಲ್ಲಿ ಸುಮಾರು 1500 ಕ್ಕೂ ಅಧಿಕ ಮಂದಿ ಪ್ರಯೋಜನ ಪಡೆದರು. ನಾಗರಭಾವಿಯ ಫೋರ್ಟಿಸ್ ಸಂಸ್ಥೆ, ನಾರಾಯಣ ಹೃದಯಾಲಯ, ಮಣಿಪಾಲ ಆಸ್ಪತ್ರೆ ಯಶವಂತಪುರ, ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆ ಬೆಂಗಳೂರು, ಸ್ಪೈನ್ ಕೇರ್ ಮತ್ತು ಆರ್ಥೋ ಕೇರ್ ಆಸ್ಪತ್ರೆಯ ತಜ್ಞ ವೈದ್ಯರು ಪಾಲ್ಗೊಂಡು ಹೃದಯ ಸಂಬಂಧಿ ಖಾಯಿಲೆಗಳು, ಮೂಳೆ ಸಾಂಧ್ರತೆ ಪರೀಕ್ಷೆ, ರಕ್ತ ಸಂಬಂಧಿತ ಖಾಯಿಲೆಗಳ ತಪಾಸಣೆ ನಡೆಸಿ ಸಲಹೆ ಸೂಚನೆ ನೀಡಿದರು. ಸುಮಾರು 1500 ಜನರಿಗೆ ಆರೋಗ್ಯ ತಪಾಸಣೆ, 150 ಕ್ಕೂ ಅಧಿಕ ಜನರಿಗೆ ಇಸಿಜಿ, 50 ಕ್ಕೂ ಅಧಿಕ ಜನರಿಗೆ ಇಕೋ ಟೆಸ್ಟ್ ಮಾಡಿ ವರದಿ ನಿಡಲಾಗಿದೆ. ಆಗತ್ಯ ಇರುವವರಿಗೆ ವೈದ್ಯಕೀಯ ಸಲಹೆ ಮತ್ತು ಮುಂದೆ ವಹಿಸಬೇಕಾದ ಎಚ್ಚರಿಕೆಯ ಬಗೆಗೆ ತಿಳುವಳಿಕೆ ನೀಡಲಾಗಿದೆ.

ನಾರಾಯಣ ನೇತ್ರಾಲಯದ ತಜ್ಞ ವೈದ್ಯರಿಂದ ನೇತ್ರ ತಪಾಸಣೆ ಮತ್ತು ನೇತ್ರದಾನ ನೊಂದಾವಣೆ ಶಿಬಿರ ಆಯೋಜಿಸಲಾಗಿದ್ದು ಸುಮಾರು 200 ಕ್ಕೂ ಅದಿಕ ಮಂದಿಗೆ ನೇತ್ರ ತಪಾಸಣೆ ನಡೆಸಿ ಸೂಕ್ತ ಸಲಹೆ ನೀಡಲಾಗಿದ್ದು, ಅನೇಕರಿಗೆ ಶಸ್ತ್ರ ಚಿಕಿತ್ಸಾ ಸಲಹೆ ನಿಡಲಾಗಿದೆ. ಡಾ ರಾಜಕುಮಾರ eye ಬ್ಯಾಂಕಿಗೆ ಸುಮಾರು 50 ಜನ ನೇತ್ರದಾನದ ನೊಂದಾವಣೆ ಮಾಡಿದ್ದಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ಸಂಘದ ಸದಸ್ಯರಿಗೆ ಹಾಗೂ ಇತರರಿಗೆ ಕೋವಿಡ್–19 ಲಸಿಕೆ ಹಾಗೂ ಬೂಸ್ಟರ್ ಲಸಿಕೆಯನ್ನು ನೀಡಲಾಯಿತು.

ಕರ್ನಾಟಕ ಸರಕಾರದ ಕಿದ್ವಾಯಿ ಮೆಮೋರಿಯಲ್ ಗಂಥಿ ಸಂಸ್ಥೆ ಸಹಯೋಗದಲ್ಲಿ ನಡೆದ ಕ್ಯಾನ್ಸರ್ ಸ್ಕ್ರೀನಿಂಗ್ ತಪಾಸಣೆ ನಡೆಸಲಾಗಿದ್ದು 150 ಜನರಿಗೆ ಉಚಿತ ತಪಾಸಣೆ ಹಾಗೂ ಸರಕಾರಿ ಫಲಾನುಭವಿಗಳಿಗೆ ಉಚಿತ ಚಿಕಿತ್ಸೆ ಮಾಡಲಾಗಿದೆ. ಹಾಗೂ 35 ವರ್ಷ ಮೇಲ್ಪಟ್ಟ ಮಹಿಳೆಯರು ಸ್ತನ ಕ್ಯಾನ್ಸರ್ ತಪಾಸಣೆಯನ್ನು ಅಗತ್ಯವಾಗಿ ಮಾಡಬೇಕೆಂದು ಮನವಿ ಮಾಡಿದರು. ಮಾನಸ cochlear ಇಂಪ್ಲಾಂಟ್ ಸಂಸ್ಥೆಯ ಸಹಯೋಗದೊಂದಿಗೆ ಕಿವಿ, ಮೂಗು ಮತ್ತು ಗಂಟಲು ಸಂಬಂದಿತ ಖಾಯಿಲೆಗಳ ಕುರಿತು ತಪಾಸಣೆ ನಡೆಸಲಾಯಿತು. APDS ಸ್ಕೀಂ ಅಡಿಯಲ್ಲಿ 5 ವರ್ಷದ ಕಿವುಡ ಮತ್ತು ಮೂಕ ಮಕ್ಕಳಿಗೆ ತಪಾಸಣೆ ನಡೆಸಿ ಶಸ್ತ್ರ ಚಿಕಿತ್ಸೆಗೆ ಶಿಫಾರಸ್ಸು ಮಾಡಲಾಗಿದೆ. ಕರ್ನಾಟಕ ಮಾರ್ವರಿ ಯುತ್ ಫೆಡರೇಶನ್ ಸಹಯೋಗದೊಂದಿಗೆ ಕೃತಕ ಕಾಲು ಮತ್ತು ಕೈ ಜೋಡಣೆಯ ಬಗೆಗೆ ತಪಾಸಣಾ ಶಿಬಿರ ಆಯೋಜಿಸಿ ಸದಸ್ಯರು ಪ್ರಯೋಜನ ಪಡೆದಿದ್ದಾರೆ. ಜೀವ ವಿಮೆ, ಆರೋಗ್ಯ ವಿಮೆ, ಬ್ಯಾಂಕಿಂಗ್ ಸೇರಿದಂತೆ ವಿವಿದ ವಿಷಯಗಳ ಕುರಿತು ತಜ್ಞರಿಂದ ಮಾಹಿತಿ ಕಾರ್ಯಾಗಾರ ಏರ್ಪಡಿಸಲಾಗಿದ್ದು ಸಾರ್ವಜನಿಕರು ಪ್ರಯೋಜನ ಪಡೆದರು. ನಮ್ಮ ಸಂಘದ ಸದಸ್ಯರಾದ ನವಮಿ ಅಗ್ರೋ ಸಂಸ್ಥೆಯ ಶ್ರೀ ಉಮೇಶ್ ಶೆಟ್ಟಿಯವರು ಔಷಧೀಯ ಸಸ್ಯಗಳ ಪರಿಚಯ ಹಾಗೂ ಅದರ ಉಪಯೋಗಗಳ ಬಗ್ಗೆ ಸ್ಥಳದಲ್ಲೇ ಪ್ರದರ್ಶನ ಹಾಗೂ ಮಾಹಿತಿ ನೀಡಿದರು.



**ಆಧಾರ್ ಕಾರ್ಡ್ ಅಭಿಯಾನ**

UIDAI ಮತ್ತು ಭಾರತ ಸರಕಾರದ ಸಂಸ್ಥೆಯ ಸಹಯೋಗದೊಂದಿಗೆ ಆಧಾರ್ ನೋಂದಾವಣೆ, ತಿದ್ದುಪಡಿ ಅಭಿಯಾನ ಹಮ್ಮಿಕೊಂಡಿದ್ದು ನೂರಾರು ಜನ ಇದರ ಪ್ರಯೋಜನ ಪಡೆದರು.

ಕರ್ನಾಟಕ ಸರಕಾರದ CSC VLE ಸಹಯೋಗದಲ್ಲಿ ಸರಕಾರಿ ಸೌಲಭ್ಯಗಳ ಕುರಿತ ವಿವಿಧ ಕಾರ್ಡ್‌ಗಳನ್ನು ಸಂಘದ ಸದಸ್ಯರು ಮತ್ತು ಸಾರ್ವಜನಿಕರಿಗೆ ಮಾಡಿಕೊಡಲಾಗಿದೆ. ಹಿರಿಯ ನಾಗರೀಕ ಚೀಟಿ, ಪಾನ್ ಕಾರ್ಡ್, ವಿಧವಾ ವೇತನ, ಪಿಂಚಣಿ ಸೇರಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ 70ಕ್ಕೂ ಅಧಿಕ ಸೌಲಭ್ಯಗಳ ಪರಿಚಯ ಮತ್ತು ವಿವಿಧ ಕಾರ್ಡ್‌ಗಳನ್ನು ಉಚಿತವಾಗಿ ವಿತರಿಸಲಾಗಿದೆ.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಷಿ, ವೈದ್ಯ ಡಾ. ಗಿರಿದರ ಕಜೆ ಅತಿಥಿಗಳಾಗಿ ಆಗಮಿಸಿ ಸಮಾಜ ಸೇವಾ ಸಮಿತಿಯ ಕಾರ್ಯಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಿದ್ವಾಯಿ ಸಂಸ್ಥೆಯ ನಿರ್ದೇಶಕರಾದ ಡಾ. ಸಿ. ರಾಮಚಂದ್ರ, ಭಾರತ ಸರಕಾರದ ಕಾರ್ಮಿಕ ಸಚಿವಾಲಯ ಕಮಿಷನರ್ ಶ್ರೀ ಮಂಜುನಾಥ ಶೆಟ್ಟಿ, ಸುವರ್ಣ ನ್ಯೂಸ್ ಸಂಪಾದಕ ಶ್ರೀ ಜಯಪ್ರಕಾಶ ಶೆಟ್ಟಿ ಅವರಿಗೆ ಸೇವಾ ಚೇತನ ಪುರಸ್ಕಾರ ನೀಡಿ ಗೌರವಿಸಲಾಯಿತು. ಡಾ. ಸಿ. ರಾಮಚಂದ್ರರವರು ಮಾತನಾಡಿ, ಹಣಕ್ಕಿಂತ ಮನುಷ್ಯತ್ವ ದೊಡ್ಡದಾಗಿದ್ದು, ಮನುಷ್ಯತ್ವ ಇಲ್ಲದವರು ವೈದ್ಯಕೀಯ ವೃತ್ತಿಗೆ ಬರಬಾರದು ಎಂದು ತಿಳಿಸಿದರು.




ಇದೇ ಸಂದರ್ಭ ಪ್ರಸಿದ್ದ ಕಲಾತಂಡಗಳಿಂದ ಮಾಧವಿ ನಾಟಕ ಮತ್ತು ಆಳ್ವಾಸ್ ತಂಡದಿಂದ ಸೀತಾತ್ಮಾವಲೋಕನ ನೃತ್ಯ ರೂಪಕ ನಡಯಿತು. ಸಂಘದ ಕಲಾವಿದರು ಮತ್ತು ಅತಿಥಿ ಕಲಾವಿದರ ಕೂಡುವಿಕೆಯಲ್ಲಿ ಕೃಷ್ಣಾರ್ಜುನ ಯಕ್ಷಗಾನ ಪ್ರಸಂಗ ಏರ್ಪಡಿಸಲಾಗಿದ್ದು ನೆರೆದಿದ್ದ ಜನರ ಮೆಚ್ಚುಗೆಗೆ ಪಾತ್ರವಾಯಿತು. ಕುಮಾರಿ ಪ್ರಜ್ಞಾ ಭಂಡಾರಿ ಮತ್ತು ಕುವಾರಿ ಸ್ವಸ್ತಿಕಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಬಂಟ್ಸ್ ಸೇವಾದಳದ ಸಂಚಾಲಕರಾದ ಶ್ರೀ ಭಾಸ್ಕರ ಶೆಟ್ಟಿ ಧನ್ಯವಾದ ಸಮರ್ಪಣೆಗೈದರು.

ಬೆಂಗಳೂರಿನ ಅನೇಕ ಭಾಗದ ಸೇವಾದಳದ ಸದಸ್ಯರ ಘಟಕಗಳನ್ನು ಉದ್ಘಾಟಿಸಲಾಗಿದ್ದು, ಕೋವಿಡ್-19 ಹಾಗೂ ಇತರ ಸಂದರ್ಭಗಳಲ್ಲಿ ಸೇವೆ ಸಲ್ಲಿಸಿದ ಸದಸ್ಯರನ್ನು ಅಭಿನಂದಿಸಲಾಯಿತು. ಭಾಗವಹಿಸಿದ ಎಲ್ಲರಿಗೂ ಊಟೋಪಚಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಕಾರ್ಯಕ್ರಮವು ದಿನ ಪೂರ್ತಿ ನಡೆದಿದ್ದು ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ಹಾಗೂ ಸಂಘದ ಸದಸ್ಯರ ಸೇವಾ ಕಾರ್ಯವು ಶ್ಲಾಘನೀಯವಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ವಹಿಸಿದ್ದು, ಉಪಾಧ್ಯಕ್ಷರುಗಳಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಶ್ರೀಮತಿ ಅಮೃತಾ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿ ಶ್ರೀ ದೀಪಕ್ ಶೆಟ್ಟಿ, ಸಮಾಜ ಸೇವಾ ಸಮಿತಿ ಮತ್ತು ಬಂಟ್ಸ್ ಸೇವಾದಳದ ಚೇರ್‌ಪರ್ಸನ್ ಶ್ರೀ ಉಮೇಶ್ ಶೆಟ್ಟಿ ಎಂ. ಬಿ. ಸಮಾಜ ಸೇವಾ ಸಮಿತಿ ಸಂಚಾಲಕರಾದ ಶ್ರೀ ಅಜಿತ್ ಶೆಟ್ಟಿ ಉಳ್ತೂರು, ಸೇವಾದಳ ಸಮಿತಿಯ ಸಂಚಾಲಕರಾದ ಶ್ರೀ ಭಾಸ್ಕರ ಶೆಟ್ಟಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಕಾರ್ಯಕ್ರಮಕ್ಕೆ ದೇಣಿಗೆ / ಪ್ರಾಯೋಜಕತ್ವ ನೀಡಿದವರು;**

ಡಾ. ಜಗದೀಶ್ ಶೆಟ್ಟಿ, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು
ಶ್ರೀ ವಿಶ್ವನಾಥ ಶೆಟ್ಟಿ, ಕೆಂಜೂರು
ಶ್ರೀಮತಿ ಶ್ಯಾಮಲ ಡಿ. ಶೆಟ್ಟಿ, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು
ಶ್ರೀ ಅಮರನಾಥ್ ಶೆಟ್ಟಿ, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು
ಶ್ರೀ ಸತೀಶ್ ಶೆಟ್ಟಿ, ನಿಡುಟ್ಟು
ಡಾ. ನಿಶಾಕಾಂತ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
ಶ್ರೀ ಕೊರ್ಗಿ ಗೋಪಾಲ್ ಶೆಟ್ಟಿ
ಶ್ರೀ ಅರುಣ್ ಕುಮಾರ್ ಶೆಟ್ಟಿ, ಅಡಿಟರ್
ಶ್ರೀಮತಿ ತಾರಾಮಣಿ ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರು
ಶ್ರೀ ಉಮೇಶ್ ಶೆಟ್ಟಿ ಕೆ. ಅಡಿಟರ್ ಮತ್ತಿಕೆರೆ
ಶ್ರೀ ಗಿರಿ ಕೆ.ವಿ.
ಬಾಲಾಜಿ ಮೆಟಲ್ ಟೆಕ್
ಶ್ರೀ ರಮಿತ್ ಬಿ. ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
ಡಾ. ಕೆ. ಸುರೇಂದ್ರ ಶೆಟ್ಟಿ, ಸ್ಪೈನ್ ಕೇರ್ ಆಸ್ಪತ್ರೆ
ಶ್ರೀ ಸಂತೋಷ್ ಶೆಟ್ಟಿ (ಮೈತ್ರಿ ಗ್ರೂಪ್)
ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಜೊತೆ ಕಾರ್ಯದರ್ಶಿ
ಶ್ರೀ ಕೆ. ಭೋಜರಾಜ್ ಶೆಟ್ಟಿ, ಉಪಾಧ್ಯಕ್ಷರು
ಶ್ರೀ ಸಂತೋಷ್ ಕುಮಾರ್ ಶೆಟ್ಟಿ (ಕಿನಾರ ಹೋಟೆಲ್)
ಶ್ರೀ ಆನಂದರಾಮ್ ಶೆಟ್ಟಿ, ಮಾಜಿ ಖಜಾಂಚಿ
ಶ್ರೀ ಸಂತೋಷ್ ಎಂ. ಶೆಟ್ಟಿ, ಕೆನರಾ ಹೈಡ್ರಾಲಿಕ್ಸ್
ಶ್ರೀ ಕೆ. ನಾಗರಾಜ ರಾವ್

ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

# ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ ವತಿಯಿಂದ ಮಾರುತಿ ಪ್ರತಾಪ ಯಕ್ಷಗಾನ ಮತ್ತು ರಂಗತರಬೇತಿ ತರಗತಿಯ ಉದ್ಘಾಟನೆ



ನಮ್ಮ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ರಂಗತರಬೇತಿಯ ಉದ್ಘಾಟನೆಯನ್ನು ದಿನಾಂಕ 05.03.2022ರಂದು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ನೆರವೇರಿಸಿಕೊಟ್ಟರು. ನೀನಾಸಂ ಸಂಸ್ಥೆಯಿಂದ ತರಬೇತಿ ಪಡೆದ ನಮ್ಮದೇ ಸಮಾಜದ ಶ್ರೀ ಸದಾಶಿವ ರೈಯವರು ತರಬೇತಿ ಶಿಕ್ಷಕರಾಗಿ ನೇಮಕಗೊಂಡರು. ಮಕ್ಕಳು ಹಾಗೂ ಹಿರಿಯರು ಎರಡೂ ವಿಭಾಗದಲ್ಲಿ ರಂಗ ನಿರ್ವಹಣೆಯ ಬಗ್ಗೆ, ರಂಗದಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ ತರಬೇತಿ ನೀಡಲಾಗುವುದು. ರಂಗ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ಸಂಘದ ಮತ್ತು ಸಮಾಜದ ವಿವಿಧ ಸ್ತರದ ಜನರನ್ನು ತರಬೇತಿಗೊಳಿಸಿ ಅವರನ್ನು ಸಮರ್ಥ ರಂಗಪಟುಗಳನ್ನಾಗಿ ಮಾಡುವುದು ನಮ್ಮ ಉದ್ದೇಶ. ಸದ್ಯ 24 ಜನ ಹಿರಿಯರು ಮತ್ತು 8 ಜನ ಮಕ್ಕಳೊಂದಿಗೆ ತರಗತಿಗಳು ಪ್ರಾರಂಭವಾಗಿ ಸುಲಲಿತವಾಗಿ ಶಿಕ್ಷಕರ ನೇತೃತ್ವದಲ್ಲಿ ವಾರದಲ್ಲಿ 2 ದಿನದಂತೆ ತಿಂಗಳಿಗೆ 8 ತರಗತಿಗಳು ನಡೆಯುತ್ತಿವೆ.

ರಂಗತರಬೇತಿಯ ಉದ್ಘಾಟನೆಯ ನಂತರ ಸಂಘದ ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯ ವತಿಯಿಂದ ಮಧ್ಯಾಹ್ನ 2.00 ಘಂಟೆಗೆ ನಮ್ಮ ಸಂಘದಲ್ಲಿ ತರಬೇತಿ ಪಡೆಯುತ್ತಿರುವ ಮಹಿಳಾ ಕಲಾವಿದೆಯರಿಂದ ಮಾರುತಿ ಪ್ರತಾಪ ಎಂಬ ಯಕ್ಷಗಾನವನ್ನು ಏರ್ಪಡಿಸಲಾಗಿತ್ತು. ಕಲಾವಿದೆಯರೆಲ್ಲರೂ ನಮ್ಮ ಸಂಘದ ಯಕ್ಷಗುರು ಶ್ರೀ ಶಿವಕುಮಾರ್ ಬೇಗಾರ್‌ರವರಿಂದ ತರಬೇತಿಯನ್ನು ಪಡೆದಿದ್ದರು.

ಪುರುಷ ಯಕ್ಷಗಾನ ಕಲಾವಿದರಿಗೆ ಯಾವ ರೀತಿಯಲ್ಲೂ ಕಮ್ಮಿ ಇಲ್ಲದ ಹಾಗೆ ನಮ್ಮ ಮಹಿಳಾ ಕಲಾವಿದೆಯರೆಲ್ಲರೂ ತಮ್ಮ ಯಕ್ಷಗಾನದ ಪ್ರದರ್ಶನವನ್ನು ನೀಡಿ ಯಕ್ಷ ಪ್ರಿಯರನ್ನು ಮನರಂಜಿಸಿದರು.

ಭಾಗವತರಾಗಿ ಶ್ರೀ ಸುಬ್ರಾಯ ಹೆಬ್ಬಾರ್, ಚೆಂಡೆಯಲ್ಲಿ ಶ್ರೀ ನರಸಿಂಹ ಆಚಾರ್, ಮದ್ದಳೆಯಲ್ಲಿ ಶ್ರೀ ರಾಘವೇಂದ್ರ ಬಿಡುವಾಳ್‌ರವರು ಸಹಕರಿಸಿದ್ದರು.

**ಈ ಕಾರ್ಯಕ್ರಮಕ್ಕೆ ನಮಗೆ ಪ್ರಾಯೋಜಕತ್ವ ನೀಡಿದವರು**

| | |
|---|---|
| ಡಿಸೈರ್‌ನೆಸ್ಟ್ ಪ್ರಾಪರ್ಟಿಸ್ | ಶ್ರೀಮತಿ ಸುಜಾತ ಯು. ಹೆಗ್ಡೆ |
| ಶ್ರೀ ಅಮರನಾಥ ಶೆಟ್ಟಿ | ಶ್ರೀ ಆನಂದರಾಮ್ ಶೆಟ್ಟಿ ಬಿ. |
| ಡಾ. ನಿಶಾಕಾಂತ್ ಶೆಟ್ಟಿ | ಶ್ರೀಮತಿ ಶ್ಯಾಮಲ ಶೆಟ್ಟಿ |
| ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ | ಶ್ರೀಮತಿ ಗೀತಾ ಶೆಟ್ಟಿ |
| ಶ್ರೀಮತಿ ಕಲಾವತಿ ಬಿ. ಶೆಟ್ಟಿ | ಶ್ರೀಮತಿ ಉಷಾ ಶೆಟ್ಟಿ |
| ಶ್ರೀಮತಿ ಜಯಶ್ರೀ ಶೆಟ್ಟಿ | ಶ್ರೀಮತಿ ಸುಮತಿ ಶೆಟ್ಟಿ |
| ಶ್ರೀಮತಿ ಸುನೀತಾ ಶೆಟ್ಟಿ | ಶ್ರೀಮತಿ ಆತ್ಮಾ ಆಳ್ವ |

ಕಾರ್ಯಕ್ರಮದಂದು ಮಧ್ಯಾಹ್ನದ ಊಟೋಪಚಾರದ ವ್ಯವಸ್ಥೆ: ಶ್ರೀ ಉದಯ್ ಕುಮಾರ್ ಹೆಗ್ಡೆ ಬಿ.

ಈ ಯಕ್ಷಗಾನ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಸಂಘದ ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರಿಗೂ ಧನ್ಯವಾದಗಳು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಸಮಾಜ ಬಾಂಧವರು ಹಾಗೂ ಯಕ್ಷಗಾನ ಪ್ರಿಯರಿಗೆ ವಂದಿಸುತ್ತೇನೆ.

**ಸಂತೋಷ್ ಕುಮಾರ್ ಶೆಟ್ಟಿ**
ಸಂಚಾಲಕರು

**ಗುರುಪ್ರಸಾದ್ ಎನ್. ಹೆಗ್ಡೆ**
ಚೇರ್‌ಪರ್ಸನ್

**ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ**

# ಅಭಿನಂದನೆಗಳು



ಆರೋಗ್ಯ ಮತ್ತು ಸಾಮಾಜಿಕ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸಿದಕ್ಕಾಗಿ ಮಣಿಪಾಲ್ ಆಸ್ಪತ್ರೆ ಮುಖ್ಯಸ್ಥ ಡಾ. ಸುದರ್ಶನ್ ಬಲ್ಲಾಳ್ ಅವರಿಗೆ ಬೆಳಗಾವಿಯ ಆರ್‌ಕೆಸಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಮಾರ್ಚ್ 9, 2022ರಂದು ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡಿದರು. ಉಡುಪಿ ಮೂಲದ ಸುದರ್ಶನ್ ಬಲ್ಲಾಳ್‌ರವರು ಖ್ಯಾತ ಮೂತ್ರಪಿಂಡ ತಜ್ಞರಾಗಿದ್ದಾರೆ. ಇವರು ರಾಜ್ಯೋತ್ಸವ ಪ್ರಶಸ್ತಿ, ಬಿ.ಸಿ. ರಾವ್ ಪ್ರಶಸ್ತಿ, ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಸದ್ಯ ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

# BUNTS' SANGHA RNS EVENING COLLEGE ANNUAL SPORTS MEET 2021-22







"Sports is one of the greatest examples of hard work and dedication a human can demonstrate."

The Bunts' Sangha RNS Evening College had organized the Annual Sports Meet on 19th March, 2022 for the academic year 2021-22 at the Bunts' Sangha RNS Campus, Vijayanagar, Bangalore.

The programme began with the welcome speech by Mr. Ravish Shetty, the Physical Education Director and Mrs. Shyamala Shetty, the Principal Incharge addressed the students on the need of sports and games in the present scenario. A series of events provided the students a wide exposure to keep their body in a balanced state. Mr. Deepak Shetty, the treasurer of Bunts' Sangha Bangalore graced the occasion.

# ಹುಬ್ಬಳ್ಳಿ ಕಿಮ್ಸ್‌ನಲ್ಲಿ ದಿವ್ಯಾಂಗ ಸೇವಾ ಕೇಂದ್ರ ಉದ್ಘಾಟನೆ



ಸಕ್ಷಮ ಉತ್ತರ ಕರ್ನಾಟಕ ಪ್ರಾಂತದ ಅಧ್ಯಕ್ಷರು ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಎಸ್. ಬಿ. ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದ ಸಭಾ ಕಾರ್ಯಕ್ರಮದಲ್ಲಿ ಸಕ್ಷಮ ಉತ್ತರ ಕರ್ನಾಟಕ ಪ್ರಾಂತವು ಮಜೇಥಿಯಾ ಫೌಂಡೇಶನ್ ಆಶ್ರಯದಲ್ಲಿ ಸ್ಥಾಪಿಸಿದ್ದ ಅಂಗವಿಕಲರಿಗೆ ಎಲ್ಲಾ ರೀತಿಯ ನೆರವು ಮಾರ್ಗದರ್ಶನ ನೀಡುವ ದಿವ್ಯಾಂಗ ಸೇವಾ ಕೇಂದ್ರವನ್ನು ಉದ್ಘಾಟಿಸಲಾಯಿತು. ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಸನ್ಮಾನ್ಯ ಬಸವರಾಜ ಹೊರಹಟ್ಟಿಯವರು ಕಾರ್ಯಕ್ರಮ ಉದ್ಘಾಟಿಸಿದರು. ಮಜೇಥಿಯಾ ಫೌಂಡೇಶನ್ ಅಧ್ಯಕ್ಷ ಶ್ರೀ ಜಿತೇಂದ್ರ ಮಜೇಥಿಯಾ ಮತ್ತಿತರ ಗಣ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ



ಸಾಂದರ್ಭಿಕ ಒತ್ತಡ, ಸರಕಾರದ ನೀತಿ ನಿಯಮಗಳ ಸಡಿಲಿಕೆಯಿಂದ ಸ್ವಲ್ಪಮಟ್ಟಿನ ನಿರಾಯದೊಂದಿಗೆ ಬಂಟರ ಸಂಘ ಮಹಿಳಾ ವಿಭಾಗ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣ ಮತ್ತು ಭಾವಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಸರಳ ಕಾರ್ಯಕ್ರಮವನ್ನು ಸಂಘಟಿಸಬೇಕಾಗಿ ಬಂತು. ಮಾರ್ಚ್ 08ನೇ ತಾರೀಖು ಈ ದಿನವನ್ನು ಬಾಂಧವ್ಯ ಹಾಗೂ ಭಾವೈಕ್ಯದ ಸಮ್ಮಿಲನವನ್ನಾಗಿ ಪರಿವರ್ತಿಸಿ ಕನಕಪುರ ರಸ್ತೆಯ "ಗರಿ" ರೆಸಾರ್ಟ್‌ನಲ್ಲಿ ಒಂದು ದಿನದ 40 ಮಹಿಳಾ ಸದಸ್ಯೆಯರ ಸಂತೋಷ ಕೂಟವನ್ನು ಏರ್ಪಡಿಸಿ ಸರಳವಾಗಿ ಮಹಿಳಾ ದಿನಾಚರಣೆಗೊಂದು ಗರಿ ಮೂಡಿಸಿದರು.

ಬೆಳಿಗ್ಗೆ 7.30ಕ್ಕೆ ಸಂಕೀರ್ಣದ ಶ್ರೀ ವರಸಿದ್ಧಿ ವಿನಾಯಕನ ನಮನದೊಂದಿಗೆ, ಬಸ್ಸಿನ ಮುಖಾಂತರ ಸದ್ದು ಗದ್ದಲಗಳೊಂದಿಗೆ ಗಿರಿ ದಾಮಕ್ಕೆ ಆಗಮನ, ಮುಂದಕ್ಕೆ ಪ್ರಾತಃ ಕಾಲದ ತಿಂಡಿ ತೀರ್ಥಗಳನ್ನು ಸವಿದು, ಹಲವಾರು ಕ್ರೀಡೆಗಳ ಜೊತೆಗೆ, ರೋಪ್‌ವಾಕಿಂಗ್, ಈಜುವಿಕೆ ಎಲ್ಲವನ್ನೂ ಮನಸಾ ಅನುಭವಿಸಿ ಆಗಮಿಸಿದ ಎಲ್ಲಾ ಮಹಿಳೆಯರು ಆನಂದ ತುಂದಿಲರಾದರು.




ಹುಬ್ಬಳ್ಳಿ ಧಾರವಾಡ ಬಂಟರ ಸಂಘದಲ್ಲಿ ವಾರ್ಷಿಕ ಸ್ನೇಹಕೂಟ ಸಮಾರಂಭವು ದಿನಾಂಕ 20.03.200ರಂದು ನಡೆಯಿತು. ಕಾರ್ಯಕ್ರಮದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಆರ್ಥಿಕ ನೆರವು, ಕ್ರೀಡಾ ವಿಜೇತರಿಗೆ ಬಹುಮಾನ ವಿತರಣೆ, ಬಂಟ ಧ್ವನಿ ಸಂಚಿಕೆ ಬಿಡುಗಡೆ ಹಾಗೂ ಸಾಧಕರಿಗೆ ಸನ್ಮಾನವನ್ನು ಮಾಡಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಭಾಗವಹಿಸಿದ್ದರು.

# HEALING TOUCH



Samanvitha Shetty

One day I asked my mother: "why were you so possessive about me? You always wanted only the best for me. You never wanted me to be hurt. Even the slightest pain would make you feel miserable. You always wanted me to be only happy and have the best in my life." She smiled and told: "you are my life. Your smile is my world. I never want to see you in pain so I did everything I could to avoid any unpleasant incident in your life." She thinks as a mother it is her duty to fill my life with only happiness. As a kid I enjoyed this super protection which kept me away from anything bad happening to me. Slowly I realized, my share of pain will always find my address no matter who is trying to stop it from reaching me. My mother is one soul on this earth who will never even dream of hurting me but every time she combs my hair somehow a strand gets pulled so bad that her quota of hurting me gets served.



Getting hurt, feeling pain, facing fear, all build compassion within a person. In my life I have seen death of my grandparents, my uncle, illness of my family members, tragedy of losing my cousin and many such painful incidents. I have also seen how my mother took care of our relatives when they were sick, hospitalized or going through rough phase and how her compassion gave solace to family. I am the only kid and as an overprotective mother she always took me wherever she went. Along with family functions like wedding, pooja etc., I was always with her even at any funeral or hospital. She taught me how to behave at a happy, sad and unpleasant occasions. Her definition of my pain was only things which hurt me from her point of view. But being at places where the environment is unpleasant is unavoidable. She always taught me, here there is no choice and it is important to be there for the family.

I am lucky to have such a compassionate mother because today I know how to take care of a sick person, how to sit beside someone who lost their loved ones without saying a word and still ensuring they have a shoulder to cry. Me and my husband both come from very big families. I say that because we both have more than 25 cousins each. Initially I felt he was lucky because he had not seen as much of death and illness in his family as I did. But over a period, I realized the importance of going through such incidents early in life. What my mother did to me when I was a kid made all the difference to my life as an adult. She definitely wanted me to have a happy life but she never kept me away from other's pain. She taught me if someone is ill and they are sleeping, waking them up at the time to give them medicine is the right thing. That is not called disturbing their sleep. She taught me if I have to hold an old lady's hand when she finds it difficult to climb the stairs, allow her to feel you the way she is comfortable. Helping someone doesn't mean we go overboard. It means we are there in plain sight so you can confidently stumble knowing there is someone to keep you safe.

